# ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು



ಆತನು ಕೆಲವರನ್ನು ಅಪೊಸ್ತಲರನ್ನಾಗಿಯೂ ಕೆಲವರನ್ನು ಪ್ರವಾದಿಗಳನ್ನಾಗಿಯೂ ಕೆಲವರನ್ನು ಸುವಾರ್ತಿಕರನ್ನಾಗಿಯೂ ಕೆಲವರನ್ನು ಸಭಾಪಾಲಕರನ್ನಾಗಿಯೂ ಉಪದೇಶಿಗಳನ್ನಾಗಿಯೂ ಅನುಗ್ರಹಿಸಿದನು. ಕ್ರಿಸ್ತನ ಪರಿಪೂರ್ಣತೆಯಂಬ ಪ್ರಮಾಣವನ್ನು ಮುಟ್ಟುವ ತನಕ ದೇವಜನರನ್ನು ಯೋಗ್ಯಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ ಸಭೆಯ ಸೇವೆಗೋಸ್ಕರವೂ ಕ್ರಿಸ್ತನ ದೇಹವು ಅಭಿವೃದ್ಧಿಯಾಗುವುದಕ್ಕೋಸ್ಕರವೂ ಆತನು ಇವರನ್ನು ಅನುಗ್ರಹಿಸಿದನು.
(ಎಫೆಸ 4:11-12)

**ಆಶೀಸ್ ರಾಯ್‌ಚುರ್**

ಮುದ್ರಣ ಮತ್ತು ವಿತರಣೆ: **ಆಲ್ ಪೀಪ್‌ಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು**
ಪ್ರಥಮ ಪ್ರತಿ ಮುದ್ರಣ: ಆಗಸ್ಟ್ 2008

ಕನ್ನಡಕ್ಕೆ ಭಾಷಾಂತರಿಸಿದವರು: ಮೋಸೆಸ್ ಮಂಜುನಾಥ್
ಕರಡು ಪ್ರತಿ ತಿದ್ದಿದವರು: ಇಮ್ಮಾನ್ಯುಯಲ್ ಪಿ. ಕುಮಾರ್
ಮುಖಪುಟ ಮತ್ತು ವರ್ಣವಿನ್ಯಾಸ: ಕರುಣಾ ಜೆರೋಮ್, ಬ್ರೈಫೈಯ್ಡ್ ಡಿಸೈನ್ಸ್

Contact Information:
All Peoples Church & World Outreach
2nd Floor, No. 7M, 2nd Block,
HRBR Layout, Kalyan Nagar, Bangalore 560 043
Karnataka, INDIA

Phone: +91-80-65970617
Email: contact@apcwo.org
Website: www.apcwo.org

Unless otherwise indicated, all Scripture quotations are taken from the Holy Bible, New King James Version.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

(Kannada Book - Equipping the Saints)

# ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು

# ಒಳ ಅಂಶಗಳು


ಮುನ್ನುಡಿ

1. ವರ್ತಮಾನ ಕಾಲದಲ್ಲಿನ ದೇವರ ಚಲನೆ 1

2. ವಿಶ್ವಾಸಿಗಳ ಕರ್ತವ್ಯ 11

3. ಐದು ಸೇವಾ ಕಾರ್ಯಗಳನ್ನು ನಡೆಸುವ ಸೇವಕರ ಕರ್ತವ್ಯ 18

4. ಬದಲಾವಣೆಯನ್ನು ಉಂಟುಮಾಡುವುದು 27

5. ಪಟ್ಟಣ ವ್ಯಾಪಕವಾದ ಸಭೆ 37

ಪ್ರಾರ್ಥನೆ 45

# ಮುನ್ನುಡಿ

ಆಲ್ ಪೀಪಲ್ಸ್ ಚರ್ಚ್‌ನಲ್ಲಿ ನಡೆದ 2008 ರ ವಾರ್ಷಿಕ ಕ್ರೈಸ್ತ ಸೇವಕರ ಮಹಾಸಭೆಯಲ್ಲಿ ಹಂಚಲ್ಪಟ್ಟಂತ 5 ಸಂದೇಶಗಳು ಈ ಪುಸ್ತಕದಲ್ಲಿ ಸೇರಿವೆ. ಇದು ಬೆಂಗಳೂರಿನಲ್ಲಿ ನಡೆದ ನಮ್ಮ ಮೊದಲನೆಯ ಕ್ರೈಸ್ತ ಸೇವಕರ ಮಹಾಸಭೆ.

ಈ ಸಭೆಯ ಮುಖ್ಯ ಅಂಶ ಏನೆಂದರೆ ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು.

ಬೆಂಗಳೂರಿನಲ್ಲಿ ಮತ್ತು ಭಾರತದ ಎಲ್ಲಾ ಭಾಗಗಳಲ್ಲಿ ಈ ಸಂದೇಶಗಳನ್ನು ಸಭಾಪಾಲಕರೊಂದಿಗೆ ಮತ್ತು ಕ್ರೈಸ್ತ ಸೇವಕರೊಂದಿಗೆ ಹಂಚಿಕೊಳ್ಳಲು ನನಗೆ ಅಗತ್ಯವೆನಿಸಿತು. ಈ ಉದ್ದೇಶದ ಮೇರೆಗೆ ಇಲ್ಲಿರುವ ಸಂದೇಶಗಳು ಮುದ್ರಿಸಲ್ಪಟ್ಟು ನಿಮ್ಮ ಕೈಗೆ ಸೇರಿವೆ. ಇದು ನಿಮಗೆ ಸಹಾಯಕವಾಗಲೆಂದು ನಾವು ನಂಬುತ್ತೇವೆ. ಈ ಸಂದೇಶಗಳು ಕೇವಲ 5 ಸಭಾ ಕಾರ್ಯಗಳಿಗೆ ಸೀಮಿತವಾಗಿರುವುದು ಅಷ್ಟೇ ಅಲ್ಲದೆ, ಕ್ರಿಸ್ತನಲ್ಲಿ ಎಲ್ಲಾ ವಿಶ್ವಾಸಿಗಳಿಗೆ ಬಹು ಬೆಲೆಯುಳ್ಳದೆಂದು ನಂಬುತ್ತೇವೆ ಮತ್ತು ದೇವರ ಹೊಸ ಕಾರ್ಯಗಳಿಗೆ ಈ ಸಂದೇಶಗಳು ಅವರನ್ನು ಪುನಃಶ್ಚೇತನಗೊಳಿಸಿ ಪ್ರೋತ್ಸಾಹಿಸಲು ಸಹಾಯಕವಾಗುತ್ತದೆ ಎಂದು ಭರವಸವುಳ್ಳವರಾಗಿದ್ದೇವೆ.

ದೇವರ ಹೊಸ ಕಾರ್ಯಕ್ಕಾಗಿ ನಾವು ಸಿದ್ಧರಾಗೋಣ. ಲೋಕದ ಅನೇಕ ಕಡೆಗಳಲ್ಲಿ ಕ್ರೈಸ್ತ ನಾಯಕರುಗಳು ಇದನ್ನು "ವಿಶ್ವಾಸಿಗಳ ಚಳುವಳಿ" ಎಂದು ಕರೆದಿದ್ದಾರೆ. ಈ ವಿಶ್ವಾಸಿಗಳ ಚಳುವಳಿಯು ಆಗಲೆ ಪ್ರಾರಂಭವಾಗಿದೆ. ನಾವು ಇದಕ್ಕಾಗಿ ಸಿದ್ಧರಾಗಬೇಕು ಮತ್ತು ಬದಲಾವಣೆಯನ್ನು ಉಂಟುಮಾಡಬೇಕು. ಇಲ್ಲವಾದರೆ ನಾವು ಹಿಂದುಳಿಯಲ್ಪಡುತ್ತೇವೆ.

ಆಶೀರ್ವಾದಗಳು
ಆಶೀಸ್ ರಾಯ್‌ಚುರ್, ಪಾಸ್ಟರ್

# 1

# ವರ್ತಮಾನ ಕಾಲದಲ್ಲಿನ ದೇವರ ಚಲನೆ

**ತಾನು ಕಾಲವು ಪರಿಪೂರ್ಣವಾದಾಗ ನಿರ್ವಹಿಸಬೇಕಾದ ಒಂದು ಕೃಪೆಯುಳ್ಳ ಸಂಕಲ್ಪವನ್ನು ಆತನು ಕ್ರಿಸ್ತನಲ್ಲಿ ಮೊದಲೇ ನಿಷ್ಕರ್ಷೆ ಮಾಡಿಕೊಂಡಿದ್ದನು. ಅದೇನೆಂದರೆ ಭೂಪರಲೋಕಗಳಲ್ಲಿ ಇರುವ ಸಮಸ್ತವನ್ನೂ ಕ್ರಿಸ್ತನಲ್ಲಿ ಒಂದಾಗಿ ಕೂಡಿಸಬೇಕೆಂಬುದೇ. ಕ್ರಿಸ್ತನಲ್ಲಿಯೇ ಸಮಸ್ತವು ಒಂದಾಗುವುದು. ಇದಲ್ಲದೆ ಆತನಲ್ಲಿ ನಾವು ದೇವರ ಸ್ವಕೀಯ ಪ್ರಜೆಯಾದೆವು. ಬರಬೇಕಾದ ಕ್ರಿಸ್ತನನ್ನು ಎದುರುನೋಡುತ್ತಿದ್ದ ನಾವು ತನ್ನ ಮಹಿಮೆಯನ್ನು ಪ್ರಖ್ಯಾತಿಪಡಿಸಬೇಕೆಂದು ಸಮಸ್ತಕಾರ್ಯಗಳನ್ನು ತನ್ನ ಇಷ್ಟದಂತೆ ನಡೆಸುವ ದೇವರು ತನ್ನ ಸಂಕಲ್ಪದ ಮೇರೆಗೆ ನಮ್ಮನ್ನು ಆದಿಯಲ್ಲಿಯೇ ಆರಿಸಿಕೊಂಡನು.** (ಎಫೆಸದವರಿಗೆ 1: 9–12)

**ನಾನು ಕ್ರಿಸ್ತನ ಅಪ್ರಮೇಯವಾದ ಐಶ್ವರ್ಯದ ವಿಷಯವಾದ ಶುಭಸಮಾಚಾರವನ್ನು ಅನ್ಯಜರಿಗೆ ಪ್ರಸಿದ್ಧಿಪಡಿಸುವ ಹಾಗೆಯೂ ಸಮಸ್ತವನ್ನು ಸೃಷ್ಟಿಸಿದ ದೇವರಲ್ಲಿ ಆದಿಯಿಂದ ಮರೆಯಾಗಿದ್ದ ಮರ್ಮವು ಪ್ರಕಟವಾಗುವ ವಿಧ ಎಂಥದೆಂದು ತಿಳಿಸುವ ಹಾಗೆಯೂ ದೇವಜನರೊಳಗೆ ಅತ್ಯಲ್ಪನಾದ ನನಗೆ ಅನುಗ್ರಹಿಸೋಣವಾಯಿತು. ದೇವರು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿ ಆನಾದಿಕಾಲದಿಂದ ಮಾಡಿದ ಸಂಕಲ್ಪದ ಮೇರೆಗೆ ತನ್ನ ನಾನಾ ವಿಧವಾದ ಜ್ಞಾನವು ಪರಲೋಕದಲ್ಲಿ ರಾಜತ್ವಗಳಿಗೂ ಅಧಿಕಾರಗಳಿಗೂ ಈಗ ಕ್ರೈಸ್ತ ಸಭೆಯ ಮೂಲಕ ಗೊತ್ತಾಗಬೇಕೆಂಬುದನ್ನು ಉದ್ದೇಶಿಸಿದ್ದನು.** (ಎಫೆಸ 3: 9–11)

ದೇವರು ತನ್ನ ನಿತ್ಯತ್ವದ ಸಂಕಲ್ಪಗಳನ್ನು ಪೂರೈಸಲು ಭೂಮಿಯ ಮೇಲೆ ಕಾರ್ಯ ನಡೆಸುತ್ತಾ ಇದ್ದಾನೆ. ಆತನ ಉದ್ದೇಶ ಮತ್ತು ಸಂಕಲ್ಪಗಳನ್ನು ಮನುಷ್ಯನ ಮೂಲಕ ಕಾರ್ಯ ನಿರ್ವಹಿಸುತ್ತಾ ಇದ್ದಾನೆ.

ದೇವರು ತನ್ನ ಕಾರ್ಯವನ್ನು ಭೂಮಿಯ ಮೇಲೆ ಇನ್ನೂ ಮಾಡುತ್ತಾ ಇದ್ದಾನೆ. ಆತನು ತನ್ನ ಉದ್ದೇಶ ಮತ್ತು ಯೋಜನೆಗಳನ್ನು ಕಾರ್ಯ ನಿರ್ವಹಿಸುವಲ್ಲಿ ನಿಲ್ಲಿಸಿಲ್ಲ. ಆತನು ತನ್ನ ಕಾರ್ಯಗಳನ್ನು ಮಾನವನ ಮೂಲಕ ಪೂರ್ಣಗೊಳಿಸಿ ನಾವು ಎಲ್ಲಿರಬೇಕೋ ಅಲ್ಲಿಗೆ ತನ್ನ ಇಚ್ಛೆಯ ಪ್ರಕಾರ ನಡೆಸುತ್ತಿದ್ದಾನೆ. ಇದರಿಂದ

ಪರಿಪೂರ್ಣವಾದ ಕಾಲದಲ್ಲಿ ನಮ್ಮನ್ನು ಬಹು ಪ್ರಧಾನ ಸೃಷ್ಟಿಯನ್ನಾಗಿ ಪೂರ್ಣಗೊಳಿಸುವನು.

**ಆದದರಿಂದ ದೇವರು ನಿಮ್ಮ ಪಾಪಗಳನ್ನು ಅಳಿಸಿಬಿಡುವ ಹಾಗೆ ನೀವು ಪಶ್ಚಾತ್ತಾಪಪಟ್ಟು ಆತನ ಕಡೆಗೆ ತಿರುಗಿಕೊಳ್ಳಿರಿ. ತಿರುಗಿದರೆ ದೇವರ ಸನ್ನಿಧಾನದಿಂದ ವಿಶ್ರಾಂತಿಕಾಲಗಳು ಒದಗಿ ಆತನು ನಿಮಗೆ ನೇಮಕವಾಗಿರುವ ಕ್ರಿಸ್ತನಾದ ಯೇಸುವನ್ನು ಕಳುಹಿಸಿಕೊಡುವನು. ಆದರೆ ಸಮಸ್ತವನ್ನು ಸರಿಮಾಡುವ ಕಾಲವು ಬರುವ ತನಕ ಪರಲೋಕವೇ ಆ ಕ್ರಿಸ್ತನ ಸ್ಥಾನವಾಗಿರಬೇಕು. ಆ ಕಾಲದ ವಿಷಯವಾಗಿ ದೇವರು ಪೂರ್ವದಲ್ಲಿದ್ದ ತನ್ನ ಪರಿಶುದ್ಧ ಪ್ರವಾದಿಗಳ ಬಾಯಿಂದ ಹೇಳಿಸಿದ್ದಾನೆ.** (ಅ. ಕೃ 3: 19–21)

ದೇವರು ತನ್ನ ಇಚ್ಚೆಯ ಪ್ರಕಾರ ಸಮಸ್ತವನ್ನು ಸರಿಮಾಡುವ ಕಾಲವು ಬರುವ ತನಕ ಕ್ರಿಸ್ತನು ಪರಲೋಕದಲ್ಲಿಯೇ ಇರುವನು.

ಕ್ರಿಸ್ತನು ಇನ್ನು ಹಿಂದಿರುಗಲಿಲ್ಲವಾದ ಕಾರಣ, ದೇವರ ಪುನಃಶ್ಚೇತನಗೊಳಿಸುವ ಅಥವಾ ವಿಶ್ರಾಂತಿಕಾಲಗಳ ಮಧ್ಯದಲ್ಲಿದ್ದೇವೆ. ದೇವರು ಸಮಸ್ತವನ್ನು ಪೂರ್ಣವಶಮಾಡಿ ಸರಿಮಾಡುತ್ತಿದ್ದಾನೆ. ಆತನ ಪ್ರಕಾರವೇ ನಡೆಯುವಂತದ್ದಾಗಿದೆ.

ಈ ಪುನಃಶ್ಚೇತನಗೊಳಿಸುವ ದೇವರ ಕಾರ್ಯದ ಮಧ್ಯದಲ್ಲಿ ಸಭೆಯು ಇದೆ. ಯಾಕೆಂದರೆ ದೇವರ ಉದ್ದೇಶದ ಪ್ರಕಾರ ಸಭೆಯ ಮೂಲಕವಾಗಿ ತನ್ನ ಬಹುವಿಧವಾದ ಜ್ಞಾನವನ್ನು ತೋರಿಸುವನು.

## ಸಭೆಯ ಚರಿತ್ರೆಯ ಒಂದು ಒಳನೋಟ

### ಪವಿತ್ರಾತ್ಮನ ಚಲಿಸುವಿಕೆಯ ಒಂದು ಚಿತ್ರಣ

- **400–1400 ಕ್ರಿ ಶ:** ಈ ಕಾಲದಲ್ಲಿ ಸಭೆಯು ಆತ್ಮಿಕವಾಗಿ ಬಹಳ ಕ್ಷೀಣವಾದ ಸ್ಥಿತಿಯಲ್ಲಿತ್ತು.

### ಉಜ್ಜೀವನ ಮತ್ತು ಪುನಃಶ್ಚೇತನ

ಸುಧಾರಣ ಚಳುವಳಿಯು 1500 ಮಾರ್ಟಿನ್ ಲೂತರ್ ಎಂಬಾತನಿಂದ ಪ್ರಾರಂಭವಾದ ದಿನದಿಂದಲೂ ದೇವರು ಸಭೆಯನ್ನು ಹಂತ ಹಂತವಾಗಿ ಪುನಃಶ್ಚೇತನಕ್ಕೆ ನಡೆಸುವುದನ್ನು ನಾವು ನೋಡುತ್ತೇವೆ.

ಕೆಲವು ಭಾಗಗಳಲ್ಲಿ ಉಜ್ಜೀವನವು ಕಾರ್ಯಪೂರ್ವಕವಾಗಿ ಕಂಡುಬಂದರು ಕ್ರಮೇಣ ನಿಂತುಹೋಯಿತು. ಮತ್ತು ಕೆಲವು ಉಜ್ಜೀವನಗಳು ಚಳುವಳಿಯ ರೂಪದಲ್ಲಿ ಕಂಡುಬಂದು ಶಕ್ತಿಯುತವಾದ ಸತ್ಯಾಂಶಗಳನ್ನು ಮತ್ತು ದೇವರ ಪ್ರಸನ್ನತೆಯನ್ನು ಬಿಡುಗಡೆಗೊಳಿಸುವ ಮೂಲಕ ಪುನರ್ಶ್ಚೇತನ ಉಂಟಾಯಿತು. ಇದು ಕ್ರಮೇಣ ಸಭೆಗೆ ಸುಧಾರಣೆಯನ್ನು ಉಂಟುಮಾಡಿತು. ಈ ಉಜ್ಜೀವನದಲ್ಲಿ ಉಂಟಾದ ದೇವರ ಚಲಿಸುವಿಕೆ ಮತ್ತು ಸತ್ಯಾಂಶದ ಮೂಲಕ ಕ್ರಿಸ್ತನ ದೇಹ ಅಂದರೆ ಸಭೆಗೆ ಪರಿಣಾಮ ಉಂಟಾಯಿತು. ಇದರಿಂದ ಒಂದು ನಿರ್ದಿಷ್ಟವಾದ ಸಭೆಯ ಸುಧಾರಣೆ ಉಂಟಾಯಿತು.

ದೇವರು ಪ್ರಾರಂಬಿಸಿದ್ದನ್ನು ಮನುಷ್ಯನು ಕಲಿಯಲು ಪ್ರಾರಂಬಿಸಿದನು. ಈಗಿನ ಅನೇಕ ಧಾರ್ಮಿಕ ಪಂತ ಅಥವಾ ಪಂಗಡಗಳು ದೇವರ ಚಲಿಸುವಿಕೆಯಿಂದ ಉಂಟುಮಾಡಲ್ಪಟ್ಟವು. ದೇವರು ಯಾವುದನ್ನು ಬಿಡುಗಡೆಗೊಳಿಸಿದ್ದಾನೋ ಅದಕ್ಕೆ ವಿಧಾನ ಮತ್ತು ಆಕಾರಗಳನ್ನು ಒದಗಿಸುವುದರಲ್ಲಿ ತಪ್ಪೇನು ಇಲ್ಲ. ಕೊಡಲ್ಪಟ್ಟಿರುವ ಸತ್ಯಾಂಶ ಮತ್ತು ಪವಿತ್ರಾತ್ಮನ ಕಾರ್ಯಗಳಿಗೆ ಬದಲಾಗಿ ವಿಧಾನ ಮತ್ತು ಆಕಾರಗಳನ್ನು ಆರಾಧ್ಯ ರೂಪಕ್ಕೆ ಒಳಪಡಿಸದಂತೆ ಕಾಳಜಿ ವಹಿಸುವಂತದ್ದು ಅಗತ್ಯ. ಒಂದು ವೇಳೆ ನಾವು ಸತ್ಯಾಂಶ ಮತ್ತು ಕಾನೂನುಗಳನ್ನು ಅಚ್ಚು ಮೆಚ್ಚಾಗಿ ಆರಾಧ್ಯಗೊಳಿಸಿದರೆ ಪ್ರಾಚೀನ ಕಾಲದ ಅವಶೇಷಗಳ ಮೂಡನಂಬಿಕೆಗಳಿಗೆ ಒಳಗಾಗುತ್ತೇವೆ. ಹೀಗಾದರೆ ಜೀವ ಮತ್ತು ಶಕ್ತಿ ಇಲ್ಲದ ಸಂಪ್ರದಾಯ ಮತ್ತು ಪದ್ಧತಿಗಳಲ್ಲಿ ನಾವು ಉಳಿಯುತ್ತೇವೆ.

ದೇವರು ತನ್ನ ಆತ್ಮನ ಕಾರ್ಯಗಳನ್ನು ಮತ್ತು ನೂತನವಾದಂತ ಸತ್ಯಾಂಶಗಳನ್ನು ಸಭೆಯ ಮೂಲಕ ಬಿಡುಗಡೆಗೊಳಿಸುವುದರಲ್ಲಿ ಮುಂದುವರಿಸುತ್ತಿದ್ದಾನೆ. ಪುನರ್ವಶ ಮಾಡಲ್ಪಟ್ಟ ಸತ್ಯಾಂಶಗಳು ನೂತನವಾದಂತ ಸತ್ಯಾಂಶಗಳಲ್ಲ. ಬದಲಾಗಿ ಈ ಸತ್ಯಾಂಶಗಳು ಆಗಲೇ ದೇವರ ವಾಕ್ಯದಲ್ಲಿ ಪ್ರಕಟಿಸಲ್ಪಟ್ಟಿರುತ್ತದೆ. ಆದರೆ ಇವುಗಳನ್ನು ನೋಡಲು ನಮಗೆ ನಿಜವಾದ ಪ್ರಕಟಣೆ ಉಂಟಾಗಲಿಲ್ಲ. ಆತ್ಮನ ನೂತನವಾದಂತ ಚಲಿಸುವಿಕೆಯು ಪರಿಶುದ್ಧಾತ್ಮನು ಬದಲಾಗುತ್ತಿದ್ದಾನೆ ಎಂದು ಅರ್ಥವಲ್ಲ ಆದರೆ ಇದು ದೇವರು ನೂತನವಾದಂತ ಅನುಭವವುಳ್ಳ ಹಂತಗಳ ಕಡೆಗೆ ಅಥವಾ ನಾವು ಇನ್ನು ಅನುಭವಿಸದೆ ಇರುವ ಕಾರ್ಯಗಳ ಕಡೆಗೆ ನಡೆಸುವಂತದ್ದು.

ಪುನರ್ವಶ ಮಾಡಲ್ಪಟ್ಟ ಸತ್ಯಾಂಶಗಳು. ಮತ್ತು ಅವುಗಳ ಚಳುವಳಿಯಿಂದ ಉಂಟಾದ ಹಂತ ಮತ್ತು ಪಂಗಡಗಳು ಯಾವುವೆಂದು ಕ್ಲುಪ್ತವಾಗಿ ನೋಡೋಣ.

➢ **1500 – ಪ್ರೋಟೆಸ್ಟೆಂಟ್ ಚಳುವಳಿ:–** ರಕ್ಷಣೆಯು ಕ್ರಿಸ್ತನಲ್ಲಿ ನಂಬಿಕೆಯ ಮೂಲಕ ಕೃಪೆಯಿಂದಲೆ ಮತ್ತು ಎಲ್ಲಾ ವಿಶ್ವಾಸಿಗಳು ಯಾಜಕರಾಗಿದ್ದಾರೆ ಎಂಬ ಸತ್ಯಾಂಶಗಳನ್ನು ಈ ಚಳುವಳಿಯು ಪ್ರಕಟಿಸಿತು.

- ◆ ಲೂತರನ್, ಎಪಿಸ್ಕೋಪಿಯನ್, ಪ್ರೆಸ್ಬಿಟೇರಿಯನ್ ಮತ್ತು ಕಾಂಗ್ರಿಗೇಷನಲ್ ಪಂತಗಳು ಇತರೆ

➢ **1600 ರ ಪ್ಯೂರಿಟನ್ ಚಳುವಳಿ:–** ನೀರಿನಲ್ಲಿ ದೀಕ್ಷಾಸ್ನಾನದ ಪ್ರಾಮುಖ್ಯತೆಯನ್ನು ಮತ್ತು ಸಭೆಯು ರಾಜ್ಯಾಡಳಿತದಿಂದ ಪ್ರತ್ಯೇಕವಾಗಿದೆ ಎಂಬ ಅರಿವನ್ನು ಈ ಚಳುವಳಿಯು ಮೂಡಿಸಿತು.

- ◆ ಮೆನೊನೈಟ್, ಬ್ಯಾಪ್ಟೀಸ್ಟ್ ಮತ್ತು ಬೇರೆ ಪಂಡಮೆಂಟಲ್ ಎವಂಜಿಲಿಕಲ್ ಪಂತಗಳು ಮತ್ತು ಇತರೆ

➢ **1700, ಹೋಲಿನೆಸ್ ಚಳುವಳಿ:–** ಪರಿಶುದ್ದತೆ ಮತ್ತು ಸಭೆಯು ಪರಿಪೂರ್ಣವಾಗಿ ಲೋಕದಿಂದ ಪ್ರತ್ಯೇಕಿಸಲ್ಪಟ್ಟಿದೆ. ಎಂಬ ಸತ್ಯಾಂಶಗಳನ್ನು ಈ ಚಳುವಳಿಯು ತಂದಿತು.

- ◆ ಮೆತೋಡಿಸ್ಟ್, ನಜರೇನ್, ಚರ್ಚ್ ಅಫ್ ಗಾಡ್, ಹೋಲಿನೆಸ್ ಚರ್ಚ್ ಮತ್ತು ಇತರೆ ಪಂತಗಳು.

➢ **1800 – ಡಿವೈನ್ ಹೀಲಿಂಗ್ ಚಳುವಳಿ:–**ಅಸ್ವಸ್ಥವಾದ ದೇಹಗಳಿಗೆ ದೇವರು ಸ್ವಸ್ಥತಾ ಶಕ್ತಿಯನ್ನು ತೋರಿಸುವುದರಲ್ಲಿ ಈ ಚಳುವಳಿಯು ಪ್ರಕಟಣೆ ಉಂಟುಮಾಡಿತು.

- ◆ ಕ್ರಿಶ್ಚಿಯನ್ ಮಿಷನರೀಸ್ ಅಲೈಯನ್ಸ್ ಮತ್ತು ಇತರೆ.

➢ **1900, ಪೆಂಟಕೋಷ್ಟಲ್ ಚಳುವಳಿ:**– ಪರಿಶುದ್ಧಾತ್ಮನ ಸ್ನಾನ ಮತ್ತು ಅನ್ಯಭಾಷೆಗಳಲ್ಲಿ ಮಾತಾನಾಡುವುದರ ವಿಷಯವಾಗಿ ಈ ಚಳುವಳಿಯು ಸತ್ಯಾಂಶಗಳನ್ನು ಉಂಟುಮಾಡಿತು.

- ಪೆಂಟಕೋಸ್ಟಲ್ ಚಳುವಳಿ 1900–1940
  - ಅಸೆಂಬ್ಲಿ ಅಫ್ ಗಾಡ್, ಯುನೈಟೆಡ್ ಪೆಂಟಕೋಸ್ಟಲ್, ಪೋರ್‌ಸ್ಕ್ವೋರ್, ಚರ್ಚ್ ಆಫ್ ಗಾಡ್ ಇನ್ ಕ್ರೈಸ್ಟ್.
- ಕಾರೆಸ್ಮಾಟಿಕ್ ಚಳುವಳಿ 1950–1970
  - ನಾನ್ ಡಿನಾಮಿನೇಷನಲ್ ಚರ್ಚ್ ಇಂಡಿಪೆಂಡೆಂಟ್ ಚರ್ಚ್ ಕಾರೆಸ್ಮಾಟಿಕ್ ಚರ್ಚ್, ಫೈತ್ ಅಂಡ್ ವರ್ಡ್ ಚರ್ಚ್, ಮಿನಿಸ್ಟ್ರಿಲ್ ಫೆಲೋಶಿಪ್
- ಪ್ರಾಪೆಟಿಕ್ । ಅಪೋಸ್ಟೆಲಿಕ್ ಚಳುವಳಿ 1980–1990'
  - ಪ್ರಾಪೆಟಿಕ್ ಚರ್ಚ್ ಅಂಡ್ ನೆಟ್‌ವರ್ಕ್ ಅಪೋಸ್ಟೆಲಿಕ್ ಚರ್ಚ್ ಅಂಡ್ ನೆಟ್‌ವರ್ಕ್

➢ **2000 ಪೆಂತಕೊಷ್ಟ್ ಚಳುವಳಿ** ಆದ ಮೇಲೆ ನಾನಾತರವಾಗಿ ಮತ್ತು ಸ್ಪಷ್ಟವಾಗಿ ಗುರುತಿಸಲ್ಪಟ್ಟ ಚಲನೆಗಳು ಸಭೆಗಳಲ್ಲಿ ಕಂಡುಬಂದವು ಇವುಗಳು ಕ್ರಿಸ್ತನ ದೇಹವು ಅಂದರೆ ಸಭೆಯು ದೇವರಲ್ಲಿ ಉನ್ನತ ಮಟ್ಟಕ್ಕೆ ಏರಲು ಪ್ರಭಾವವನ್ನು ಉಂಟುಮಾಡಿವೆ. ಅವು ಯಾವುವೆಂದರೆ.

ಐದು ಸೇವಾ ಕಾರ್ಯಗಳಾದ ಸುವಾರ್ತಿಕ ಸೇವೆ (1950 ರಲ್ಲಿ)

ಸಭಾಪಾಲಕ ಸೇವೆ (1960) ಭೋದಕರ ಸೇವೆ (1970 ರಲ್ಲಿ)

**ಪ್ರವಾದಿತಾ ಸೇವೆ** (1980 ರಲ್ಲಿ) ಮತ್ತು ಅಪೋಸ್ತಲರ ಸೇವೆ (1990 ರಲ್ಲಿ) ಇವುಗಳು ಕ್ರಿಸ್ತನ ದೇಹಕ್ಕೆ ಪುನರ್ವಶ ಮಾಡಲ್ಪಟ್ಟಿವೆ.

**ಈಗ ನಾವು ದೇವರ ವೇಳಾಪಟ್ಟಿಯಲ್ಲಿ ಪ್ರತಿ ವಿಶ್ವಾಸಿಗಳು ಸಜ್ಜುಗೊಳಿಸಲ್ಪಟ್ಟು ಸೇವಾಕಾರ್ಯಗಳಿಗೆ ಬಿಡುಗಡೆ ಮಾಡುವ ಸಮಯದಲ್ಲಿದ್ದೇವೆ.**

ಆತನು ಕೆಲವರನ್ನು ಅಪೊಸ್ತಲರನ್ನಾಗಿಯೂ ಕೆಲವರನ್ನು ಪ್ರವಾದಿಗಳನ್ನಾಗಿಯೂ ಕೆಲವರನ್ನು ಸೌವಾರ್ತಿಕರನ್ನಾಗಿಯೂ ಕೆಲವರನ್ನು ಸಭಾಪಾಲಕರನ್ನಾಗಿಯೂ ಉಪದೇಶಿಗಳನ್ನಾಗಿಯೂ ಅನುಗ್ರಹಿಸಿದನು. ನಾವೆಲ್ಲರು ನಂಬಿಕೆಯಿಂದಲೂ ದೇವಕುಮಾರನ ವಿಷಯವಾದ ಜ್ಞಾನದಿಂದಲೂ ಉಂಟಾಗುವ ಐಕ್ಯವನ್ನು ಹೊಂದಿ ಪ್ರವೀಣತೆಗೆ ಬಂದವರಾಗಿ ಕಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವ ತನಕ ದೇವಜನರನ್ನು ಯೋಗ್ಯಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ ಸಭೆಯ ಸೇವೆಗೋಸ್ಕರವೂ ಕ್ರಿಸ್ತನ ದೇಹವು ಅಭಿವೃದ್ಧಿಯಾಗುವದಕ್ಕೋಸ್ಕರವೂ ಆತನು ಇವರನ್ನು ಅನುಗ್ರಹಿಸಿದನು. (ಎಫೆಸ 4: 11–13)

ಈ ಐದು ಸೇವಾ ಕಾರ್ಯಗಳನ್ನು ದೇವರು ಕ್ರಿಸ್ತನ ದೇಹಕ್ಕೆ ಪುನರ್ವಶಮಾಡಿದ್ದಾನೆ. ಈ ಐದು ಸೇವಾ ಕಾರ್ಯಗಳ ಉದ್ದೇಶವೇನೆಂದರೆ ಪ್ರತಿ ವಿಶ್ವಾಸಿಗಳು ಸೇವಾಕಾರ್ಯಗಳಿಗಾಗಿ ಸಜ್ಜುಗೊಳ್ಳುವುದು. ಈಗ ನಾವು ದೈವ ಚಲಿಸುವಿಕೆಯ ಪ್ರಾರಂಭದ ಮುಂದಿನ ಹಂತದಲ್ಲಿದ್ದೇವೆ.

◆ **ವಿಶ್ವಾಸಿಗಳ ಚಳುವಳಿ.**

ವಿಶ್ವಾಸಿಗಳ ಚಳುವಳಿಯಲ್ಲಿ ಪ್ರತಿ ವಿಶ್ವಾಸಿಯು ದೇವರ ವಾಕ್ಯದಲ್ಲಿ, ಆತ್ಮನ ಶಕ್ತಿಯಲ್ಲಿ, ಆತ್ಮನ ವರದ ಕಾರ್ಯದಲ್ಲಿ, ಮಹತ್ಕಾರ್ಯಗಳಲ್ಲಿ, ಅದ್ಭುತಗಳಲ್ಲಿ, ಸೂಚನೆಗಳಲ್ಲಿ, ಸಜ್ಜುಗೊಳಿಸಲ್ಪಟ್ಟು ಸೇವಾಕಾರ್ಯಗಳಲ್ಲಿ ನಿರತರಾಗಿರುತ್ತಾರೆ.

ಐದು ಸೇವಾ ಕಾರ್ಯಗಳು ವಿಶ್ವಾಸಿಗಳಿಗೆ ಸೇವೆ ಸಲ್ಲಿಸುವಂತೆ ವಿಶ್ವಾಸಿಗಳಿಗೆ ಕೊಡಲ್ಪಟ್ಟಿದೆ. ಆದರೆ ಬೇರೆ ರೀತಿಯಾಗಿ ಅಲ್ಲ. ಈ ದಿನಗಳಲ್ಲಿ ಅನೇಕ ಸಭೆಗಳು ಮತ್ತು ಸೇವೆಯಲ್ಲಿ ನಾವು ಕಾಣುವುದೇನೆಂದರೆ ಐದು ಸೇವಾಕಾರ್ಯಗಳನ್ನು ನಿರ್ವಹಿಸುವ ಸೇವಕರು ನಡೆದು ಕೊಳ್ಳುವ ರೀತಿ ಹೇಗೆಂದರೆ ವಿಶ್ವಾಸಿಗಳು ನಮ್ಮ ಕಾರ್ಯಕಲಾಪಗಳಂತೆ ವರ್ತಿಸಿ ಮತ್ತು ನಮ್ಮ ದರ್ಶನಗಳನ್ನು ಪೂರೈಸುವಂತೆ ಅಪೇಕ್ಷಿಸುತ್ತೇವೆ. ಆದರೆ ಈ ರೀತಿಯಾದ ವರ್ತನೆ ವಿಶ್ವಾಸಿಗಳ ಚಳುವಳಿಯಲ್ಲಿ ಇಲ್ಲದಂತೆ ಹೋಗುತ್ತದೆ.

"ಸೇನೆಯನ್ನು ನಿರ್ವಹಿಸುವ ತಾನೊಬ್ಬನೇ" ಎಂಬುದು ಇಲ್ಲದಂತಾಗುತ್ತದೆ. ಕರ್ತನ ಸೇನೆಯು ಸಹಸ್ರಾರು ಜನಗಳಿಂದ ಕೂಡಿದ ವಿಶ್ವಾಸಿಗಳನ್ನು ಒಳಗೊಂಡಿರುತ್ತದೆ. ಈ ವಿಶ್ವಾಸಿಗಳು ಸಜ್ಜುಗೊಳ್ಳಲ್ಪಟ್ಟು ಸೇವಾ ಕಾರ್ಯಗಳಲ್ಲಿ ನಿರತರಾಗಿರುತ್ತಾರೆ. ನಡೆಸುವವರು ಮತ್ತು ನಾಯಕರುಗಳು ಇರುವಲ್ಲಿ ತಾನೊಬ್ಬನೆ ನಿರ್ವಹಿಸಲು ಸಮರ್ಥನು ಎಂಬುದಾಗಿ ತೋರಿಸಿಕೊಳ್ಳುವವರು ಇಲ್ಲದೆ ಹೋಗುತ್ತಾರೆ.

ವಿಶ್ವಾಸಿಗಳನ್ನು ಸಜ್ಜುಗೊಳಿಸಿ ಸೇವಾಕಾರ್ಯಗಳಿಗೆ ಬಿಡುಗಡೆ ಮಾಡಿದಾಗ ಕ್ರಿಸ್ತನ ದೇಹವು ಬಲವಾಗಿ ಕಟ್ಟಲ್ಪಟ್ಟಿರುವುದನ್ನು ನಾವು ಕಾಣುತ್ತೇವೆ. ಇದು ಹಿಂದೆ ಎಂದೂ ಆಗಿರದ ಸ್ಥಿತಿಯಲ್ಲಿರುತ್ತದೆ.

ಆಗ ದೇವರು ನಮ್ಮೆಲ್ಲರನ್ನು ನಂಬಿಕೆಯ ಐಕ್ಯತೆಗೆ ಮತ್ತು ದೇವಕುಮಾರನ ಜ್ಞಾನದ ಪ್ರವೀಣತೆಗೆ ತರುತ್ತಾನೆ. ನಾವು ಕ್ರಿಸ್ತನ ಪರಿಪೂರ್ಣತೆಯ ಕಡೆಗೆ ಸಾಗುತ್ತೇವೆ. ಕ್ರೈಸ್ತತ್ವವನ್ನು ನೋಡುವುದಾದರೆ ಇಂದು ಕೆಲವರು ಹೇಳುವುದೇನೆಂದರೆ ಎಲ್ಲಾ ವಿಶ್ವಾಸಿಗಳನ್ನು ನಂಬಿಕೆಯ ಐಕ್ಯತೆಗೆ ತರುವುದು ಅಸಾದ್ಯ ಎಂಬುದಾಗಿ. ನಾವು ಹಿಂದಿನ ಕಾಲವನ್ನು ಅಂದರೆ ಸಭೆಯು ಆತ್ಮೀಕವಾಗಿ ಕ್ಷೀಣವಾದ ಕಾಲವನ್ನು ನೋಡಿದರೆ ಅಂದುಕೊಳ್ಳುತ್ತಿದ್ದೆವು ಸಮಯವು ಬರುತ್ತದೆ ಆಗ ಸತ್ಯವು ಪುರ್ನವಶವಾಗುತ್ತದೆ ಮತ್ತು ಪವಿತ್ರಾತ್ಮನ ಕಾರ್ಯಗಳನ್ನು ಅನುಭವಿಸುತ್ತೇವೆ ಎಂದು ಆಗ ಅದು ಅಸಾದ್ಯವೆಂದೆಣಿಸಿರಬಹುದು. ಆದರೆ ಈಗ ನಾವು ಎಲ್ಲಿದ್ದೇವೆ ಎಂದು ಗಮನಿಸಿದರೆ ಮತ್ತು ಕರ್ತನು ಏನು ಮಾಡುತಿದ್ದಾನೆ ಎಂದು ನೋಡಿದರೆ ಎಲ್ಲವು ಸಾದ್ಯವಾಗುತ್ತದೆ. ಆದಕಾರಣ ನಾವು ಸಿದ್ದವಾಗಿರಬೇಕು. ಇಂದು ಏನು ಅಸಾದ್ಯವಾಗಿ ಕಾಣುತ್ತದೋ ಅದು ಅತೀ ಬೇಗನೆ ನಿಜರೂಪದಲ್ಲಿ ಕಂಡು ಬರುತ್ತದೆ!

ಕಳಂಕವು ಸುಕ್ಕು ಇಲ್ಲದಂತಹ ಸಭೆಗೆ ಕ್ರಿಸ್ತನು ಹಿಂತಿರುಗುತ್ತಾನೆ ಆಗ ಕ್ರಿಸ್ತನ ದೇಹದಲ್ಲಿ ಪ್ರತಿಯೊಂದು ಅಂಶಗಳು ಸರಿಯಾದ ಸ್ಥಳದಲ್ಲಿ ಒಂದಾಗಿ ಜೋಡಿಸಲ್ಪಟ್ಟು ಮತ್ತು ಅವರವರ ಕಾರ್ಯಗಳನ್ನು ಮಾಡುತ್ತಿರುತ್ತಾರೆ. (ಎಫೆಸ 5: 27)

## ವಿಶ್ವಾಸಿಗಳು ಪ್ರಾಮುಖ್ಯವಾಗಿದ್ದಾರೆ

ವಿಶ್ವಾಸಿಗಳು ಪರಿಪೂರ್ಣವಾಗಿ ದೇವರಿಗೆ ಪ್ರಾಮುಖ್ಯವಾಗಿದ್ದಾರೆಂದು ನಾವು ಅರ್ಥಮಾಡಿಕೊಳ್ಳಬೇಕು.

### ವಿಶ್ವಾಸಿಗಳು ದೇವರ ಸ್ವಾಸ್ಥ್ಯ .

**ಆತನು ನಿಮ್ಮ ಮನೋನೇತ್ರಗಳನ್ನು ಬೆಳಗಿಸಿ ಆತನಿಂದ ಕರಸಿಕೊಂಡವರು ನಿರೀಕ್ಷಿಸುವ ಪದವಿ ಎಂಥದೆಂಬುದನ್ನು ದೇವಜನರೆಂಬ ಆತನ ಸ್ವಾಸ್ಥ್ಯದ ಮಹಿಮಾತಿಶಯವು ಎಂಥದೆಂಬುದನ್ನು ನಂಬುವವರಾದ ನಾವು** (ಎಫೆಸ. 1: 18)

ಇದು ಎಂಥ ಮಹತ್ತಾದ ಸಂಗತಿಯಾಗಿದೆ! ದೇವರು ತನ್ನ ಸ್ವಾಸ್ಥ್ಯವನ್ನು ವಿಶ್ವಾಸಿಗಳಲ್ಲಿ ನೋಡುತ್ತಾನೆ, ವಿಶ್ವಾಸಿಗಳು ಆತನ ಬೆಲೆಯುಳ್ಳ ಸ್ವತ್ತು !

### ಕ್ರಿಸ್ತನು ವಿಶ್ವಾಸಿಗಳಲ್ಲಿ ಮಹಿಮೆ ಹೊಂದುತ್ತಾನೆ

**ಆ ದಿನದಲ್ಲಿ ಆತನು ತನ್ನ ಪವಿತ್ರರ ಮೂಲಕ ಪ್ರಭಾವ ಹೊಂದುವವನಾಗಿಯೂ ನಾವು ನಿಮಗೆ ಹೇಳಿದ ಸಾಕ್ಷಿಯನ್ನು ನಂಬಿದವರೆಲ್ಲರ ಮೂಲಕ ತನ್ನ ವಿಷಯದಲ್ಲಿ ಆಶ್ಚರ್ಯ ಹುಟ್ಟಿಸುವವನಾಗಿಯೂ ಬರುವಾಗ ಅಂಥವರು ಕರ್ತನ ಸಮ್ಮುಖಕ್ಕೂ ಆತನ ಪರಾಕ್ರಮದ ವೈಭವಕ್ಕೂ ದೂರವಾಗಿ ನಿತ್ಯನಾಶವೆಂಬ ದಂಡನೆಯನ್ನು ಅನುಭವಿಸುವರು** (2 ಥೆಸಲೋನಿಕ 1:10)

### ಮುಂಬರುವ ರಾಜ್ಯದಲ್ಲಿ ವಿಶ್ವಾಸಿಗಳು ಆಳುತ್ತಾರೆ

ಬಹಳ ದೂರವಿಲ್ಲದ ಭವಿಷ್ಯದಲ್ಲಿ ಈ ಲೋಕದ ರಾಜ್ಯಗಳು ಕರ್ತನಾದ ಯೇಸುಕ್ರಿಸ್ತನ ಆಳ್ವಿಕೆಯ ಅಡಿಯಲ್ಲಿ ಬರುತ್ತದೆ, ಆತನ ರಾಜ್ಯಕ್ಕೆ ಅಂತ್ಯವೇ ಇಲ್ಲ (ದಾನಿ 2: 44, ಪ್ರಕ 11: 15) ಒಂದು ಆಸಕ್ತಿಯುಳ್ಳ ಸತ್ಯಾಂಶವೇನೆಂದರೆ ಆ ರಾಜ್ಯವು ವಿಶ್ವಾಸಿಗಳಿಗೆ ಕೊಡಲ್ಪಟ್ಟಿರುತ್ತದೆ. ವಿಶ್ವಾಸಿಗಳು ಆಳ್ವಿಕೆ ನಡೆಸಿ ದೇವರ ರಾಜ್ಯದ ಅಧಿಕಾರ ವಹಿಸುತ್ತಾರೆ! ಇಂತ ಪ್ರಾಮುಖ್ಯವಾದುದನ್ನು ದೇವರು ತನ್ನ ಜನರಿಗೋಸ್ಕರ ಸಿದ್ದಮಾಡಿದ್ದಾನೆ.

**ಆದರೆ ರಾಜ್ಯವು ಪರಾತ್ಪರನ ಭಕ್ತರಿಗೆ ಲಭಿಸುವುದು, ಅವರೇ ಅದನ್ನು ತಲತಲಾಂತರಕ್ಕೂ ಶಾಶ್ವತವಾಗಿ ಅನುಭವಿಸುವರು ಎಂದು ಆ ವಿಷಯಗಳ ತಾತ್ಪರ್ಯವನ್ನು ವಿವರಿಸಿ ತಿಳಿಸಿದನು. ಆಗ ಅವನ ರಾಜ್ಯ ಪ್ರಭುತ್ವಗಳೂ ಸಮಸ್ತ ಭೂಮಂಡಲದಲ್ಲಿನ ರಾಜ್ಯಗಳ ಮಹಿಮೆಯೂ**

**ಪರಾತ್ಪರನ ಭಕ್ತಜನರಿಗೆ ಕೊಡೋಣವಾಗುವವು; ಆತನ ರಾಜ್ಯವು ಶಾಶ್ವತ ರಾಜ್ಯ ಸಕಲ ದೇಶಾಧಿಪತಿಗಳು ಆತನಿಗೆ ಅಧೀನರಾಗಿ ಸೇವೆಮಾಡುವರು ಎಂದು ಹೇಳಿದನು.** (ದಾನಿಯೇಲನು 7: 18, 27)

**ದೇವ ಜನರು ಲೋಕಕ್ಕೆ ತೀರ್ಪುಮಾಡುವರೆಂಬುದು ನಿಮಗೆ ತಿಳಿಯದೋ? ಲೋಕವು ನಿಮ್ಮಿಂದ ತೀರ್ಪನ್ನು ಹೊಂದಬೇಕಾಗಿರುವಲ್ಲಿ ಅತ್ಯಲ್ಪ ಸಂಗತಿಗಳನ್ನು ಕುರಿತು ತೀರ್ಪುಮಾಡುವುದಕ್ಕೆ ಅಯೋಗ್ಯರಾಗಿದ್ದೀರೋ?** (1 ಕೋರಿಂಥ 6: 2)

## ವಿಶ್ವಾಸಿಗಳು ಪ್ರಾಮುಖ್ಯವಾಗಿದ್ದಾರೆ

ಐದು ಸೇವಾಕಾರ್ಯ ನಡೆಸುವ ಸೇವಕರು ದೇವರ ಆಕಾಂಕ್ಷೆಯನ್ನು ಆತನ ಜನರಾದ ವಿಶ್ವಾಸಿಗಳಲ್ಲಿ ತರುವಂತದ್ದು ಅವಶ್ಯ.

ದೈವ ಜನರನ್ನು ದೇವರು ಹೇಗೆ ಶ್ರೇಷ್ಟವೆಂದೆಣಿಸುತ್ತಾನೋ ಹಾಗೆಯೇ ನಾವು ಅವರನ್ನು ಶೇಷ್ಟವೆಂದೆಣಿಸಬೇಕು. ದೇವರ ಮಹತ್ತಾದ ಸಂಕಲ್ಪಗಳನ್ನು ಪೂರೈಸುವಂತೆ ಪ್ರೀತಿ ವಿಶ್ವಾಸಗಳನ್ನು ಬಲಪಡಿಸಿ ಸಜ್ಜುಗೊಳಿಸುವಂತದ್ದು ಅಗತ್ಯವಾಗಿದೆ. ದೇವರಿಗೆ ತನ್ನ ಜನರ ಮೇಲೆ ನಿಷ್ಕಳಂಕವಾದ ಪ್ರೀತಿ ಇರುವ ಕಾರಣ ನಾವು ಕೂಡ ದೈವ ಜನರನ್ನು ಆಳವಾಗಿ ಮತ್ತು ಬಹಳ ಕರುಣೆಯುಳ್ಳವರಾಗಿ ಪ್ರೀತಿಸಬೇಕಾಗಿದೆ. ದೇವರ ಪ್ರೀತಿಯು ಅತೀಮುದ್ದಾಗಿ ಇರುವಂತ ಪ್ರೀತಿಯಲ್ಲ ಅಂದರೆ ಪಾಪವನ್ನು ಗಣನೆಗೆ ತೆಗೆದುಕೊಳ್ಳದಿರುವುದು ಮತ್ತು ಇರುವ ಬಲಹೀನತೆಗಳ ವಿಷಯದಲ್ಲಿ ಕಾಳಜಿ ವಹಿಸದಿರುವಂತದ್ದಲ್ಲ ಇದಕ್ಕೆ ಬದಲಾಗಿ ದೇವರ ಪ್ರೀತಿಯು ಕಠಿಣಕರವಾದ ಪ್ರೀತಿ ಅಂದರೆ ಬಹಳ ತಾಳ್ಮೆಯಿಂದಿರುವ ಪ್ರೀತಿ, ಯಾವುದೇ ಮಿತಿಯನ್ನು ತಿಳಿಯದ ಪ್ರೀತಿ ಮತ್ತು ಶಿಕ್ಷಿಸಿ ನಾಶಪಡಿಸದಂತಹ ತಂದೆಯ ಪ್ರೀತಿಯಾಗಿದೆ. (ಇಬ್ರಿಯ 12: 5–11) ಈ ಪ್ರೀತಿಯು ತಾಳ್ಮೆಯುಳ್ಳದ್ದು ಕರುಣೆಯುಳ್ಳದ್ದು ಎಲ್ಲವನ್ನು ನಂಬುವಂತದ್ದು ಮತ್ತು ಪಾಪದಲ್ಲಿ ಸಂತೋಷಪಡದಿರುವಂತದ್ದು (1 ಕೋರಿಂಥ 13: 4–8) ನಾವು ವಿಶ್ವಾಸಿಗಳಿಗೆ ಸೇವೆ ಸಲ್ಲಿಸುವಾಗ ಈ ರೀತಿಯಾದ ಪ್ರೀತಿಯು ನಮ್ಮನ್ನು ಪ್ರೇರಣೆಗೊಳಿಸಬೇಕು (2 ಕೊರಿಂಥ 5: 13–14).

“ವಿಶ್ವಾಸಿಗಳನ್ನು ಸಜ್ಜುಗೊಳಿಸುವುದರ” ವಿಷಯದಲ್ಲಿ ನಮ್ಮ ಗಮನವನ್ನು ಮುಂದುವರಿಸುವಾಗ ವಿಶ್ವಾಸಿಗಳಿಗೆ ಕೊಡಲ್ಪಟ್ಟ ಕಾರ್ಯಗಳು ಏನು ಎಂಬುದನ್ನು

ಅರ್ಥ ಮಾಡಿಕೊಳ್ಳುವುದು ಅವಶ್ಯ. ಐದು ಸೇವಾ ಕಾರ್ಯಗಳ ಸೇವಕರು ದೇವರ ಈ ಹೊಸ ತಿರುವಿಗೆ ಹೇಗೆ ಬದಲಾವಣೆಯನ್ನು ಉಂಟುಮಾಡಬಹುದು? ವಿಶ್ವಾಸಿಗಳ ಚಳುವಳಿಯು ಪಟ್ಟಣ ವ್ಯಾಪ್ತಿಯ ಸಭೆಗಳ ಮತ್ತು ಪಟ್ಟಣ ಬದಲಾವಣೆಗಳ ಮೇಲೆ ಹೇಗೆ ಪ್ರಭಾವ ಬೀರುತ್ತದೆ? ಈ ಕೆಲವು ಸಂಗತಿಗಳನ್ನು ನಾವು ಮುಂದಿನ ಅದ್ಯಾಯಗಳಲ್ಲಿ ನೋಡಲಿದ್ದೇವೆ.

# 2

# ವಿಶ್ವಾಸಿಗಳ ಕರ್ತವ್ಯ

ಈ ವರ್ತಮಾನ ಕಾಲದ ದೇವರ ಹೊಸ ತಿರುವಿನಲ್ಲಿ ವಿಶ್ವಾಸಿಗಳ ಕರ್ತವ್ಯ ಮತ್ತು ವಿಶ್ವಾಸಿಗಳು ತೋರಿಸುವ ಸೇವಾಕಾರ್ಯಗಳ ವಿಷಯವಾಗಿ ಅರ್ಥಮಾಡಿ ಕೊಳ್ಳುವುದು ಅವಶ್ಯ.

## ಪ್ರತಿ ವಿಶ್ವಾಸಿಯು ಸೇವಕನು

**ಆದರೆ ಕ್ರಿಸ್ತನು ನಮ್ಮಲ್ಲಿ ಒಬ್ಬೊಬ್ಬನಿಗೆ ಅನುಗ್ರಹಿಸಿದ ಪ್ರಕಾರವೇ ಅವನವನಿಗೆ ಕೃಪಾವರವು ದೊರಕಿದೆ. ಆತನು ಕೆಲವರನ್ನು ಅಪೋಸ್ತಲರನ್ನಾಗಿಯೂ ಕೆಲವರನ್ನು ಪ್ರವಾದಿಗಳನ್ನಾಗಿಯೂ ಕೆಲವರನ್ನು ಸೌವಾರ್ತಿಕರನ್ನಾಗಿಯೂ ಕೆಲವರನ್ನು ಸಭಾಪಾಲಕರನ್ನಾಗಿಯೂ ಉಪದೇಶಿಗಳನ್ನಾಗಿಯೂ ಅನುಗ್ರಹಿಸಿದನು. ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವ ತನಕ ದೇವಜನರನ್ನು ಯೋಗ್ಯಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ ಸಭೆಯ ಸೇವೆಗೋಸ್ಕರವೂ ಕ್ರಿಸ್ತನ ದೇಹವು ಅಭಿವೃದ್ಧಿಯಾಗುವುದಕ್ಕೋಸ್ಕರವೂ ಆತನು ಇವರನ್ನು ಅನುಗ್ರಹಿಸಿದನು.** (ಎಫೆಸ 4: 7, 11, 12)

ಪ್ರತಿ ವಿಶ್ವಾಸಿಗೂ ಕೃಪಾ ವರಗಳು ಕೊಡಲ್ಪಟ್ಟಿವೆ. ಮತ್ತು ಕರ್ತನು ಅವರ ಜೀವಿತಗಳಲ್ಲಿ ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ವರಗಳನ್ನು ವಿತರಿಸಿದ್ದಾನೆ, ಐದು ಸೇವಾಕಾರ್ಯ ನಡೆಸುವ ಸೇವಕರುಗಳಿಗೆ ಕೊಡಲ್ಪಟ್ಟಿರುವ ಜವಾಬ್ದಾರಿಕೆ ಏನೆಂದರೆ ವಿಶ್ವಾಸಿಗಳನ್ನು ಸಜ್ಜುಗೊಳಿಸಿ, ಅವರು ಸೇವಾಕಾರ್ಯಗಳಲ್ಲಿ ಸಮರ್ಥರಾಗುವಂತೆ ಮಾಡುವಂತದ್ದು.

ದೇವರ ವಾಕ್ಯದ ಪ್ರಕಾರ ಪ್ರತಿ ವಿಶ್ವಾಸಿಯು ಸೇವಕನಾಗಿದ್ದಾನೆ ಮತ್ತು ಸೇವಾಕಾರ್ಯಗಳನ್ನು ಮಾಡುವಂತವನಾಗಿರಬೇಕು. ಸೇವೆಯು ಕೇವಲ ಐದು ಸೇವಾಕಾರ್ಯಗಳನ್ನು ಮಾಡುವ ಸೇವಕರುಗಳಿಗೆ ಸೀಮಿತವಾಗಿಲ್ಲ.

**ಯಾಕೆಂದರೆ ನಮಗೆ ಒಂದೇ ದೇಹದಲ್ಲಿ ಬಹಳ ಅಂಗಗಳಿರಲಾಗಿ ಆ ಎಲ್ಲಾ ಅಂಗಗಳಿಗೆ ಹೇಗೆ ಒಂದೇ ಕೆಲಸ ಇರುವುದಿಲ್ಲವೋ ಹಾಗೆಯೇ ನಾವೆಲ್ಲರು ಒಟ್ಟಾಗಿ ಕ್ರಿಸ್ತನಲ್ಲಿ ಒಂದೇ ದೇಹವಾಗಿದ್ದು ಒಬ್ಬೊಬ್ಬರಾಗಿ ಪರಸ್ಪರ ಅಂಗಗಳಾಗಿದ್ದೇವೆ ದೇವರು ನಮಗೆ ಕೃಪೆಮಾಡಿದ ಪ್ರಕಾರ ನಾವು ಬೇರೆ ಬೇರೆ ವರಗಳನ್ನು ಹೊಂದಿದ್ದೇವೆ.** (ರೋಮ 12: 4–6)

ಎಲ್ಲಾ ವಿಶ್ವಾಸಿಗಳ ಕೆಲಸಗಳು ಒಂದೇ ಆಗಿಲ್ಲ ಎಂಬುದು ಸತ್ಯಾಂಶವಾಗಿರುವಾಗ, ಎಲ್ಲಾ ವಿಶ್ವಾಸಿಗಳಿಗೆ ಕ್ರಿಸ್ತನ ದೇಹದಲ್ಲಿ ಕೆಲವು ಕಾರ್ಯಗಳು ಇವೆ ಎಂಬುದು ನಿಜರೂಪದಲ್ಲಿದೆ. ನಮ್ಮಲ್ಲಿ ಪ್ರತಿಯೊಬ್ಬರು ಕೊಡಲ್ಪಟ್ಟ ದೇವರ ಕೃಪೆಯ ಮೇರೆಗೆ ಅವರವರ ವರಗಳಿಗೆ ಜವಾಬ್ದಾರಿ ವಹಿಸಲ್ಪಟ್ಟಿದ್ದಾರೆ. ಮತ್ತು ಅವರವರ ಕಾರ್ಯಗಳಿಗೆ ಅನುಸಾರವಾಗಿ ಕ್ರಿಸ್ತನ ದೇಹದಲ್ಲಿ ಕಾರ್ಯ ನಿರ್ವಹಿಸಬೇಕು.

ಪ್ರತಿ ವಿಶ್ವಾಸಿಗೆ ಸೇವೆ ಇದೆ ಎಂಬ ಸತ್ಯಾಂಶವನ್ನು ತಿಳಿದು ಹೆಚ್ಚೆತ್ತುಕೊಳ್ಳಬೇಕು. ದೇವರು ಪ್ರತಿ ವಿಶ್ವಾಸಿಯ ಜೀವಿತದಲ್ಲಿ ವರಗಳನ್ನು ಮತ್ತು ಕೃಪೆಯನ್ನು ಅನುಗ್ರಹಿಸಿ ಅವರು ಕಾರ್ಯ ನಿರ್ವಹಿಸುವಂತೆ ನೇಮಿಸಿದ್ದಾನೆ.

## ಸ್ಥಳೀಯ ಸಭೆಗಳಲ್ಲಿ ವಿಶ್ವಾಸಿಗಳಿಗೆ ಸೇವಾ ಅವಕಾಶಗಳ ಜವಾಬ್ದಾರಿ ವಹಿಸಬೇಕು

**ನೀವೆಲ್ಲರೂ ದೇವರ ವಿವಿಧ ಕೃಪೆಯ ವಿಷಯದಲ್ಲಿ ಒಳ್ಳೇ ಮನೆವಾರ್ತೆಯವರಾಗಿದ್ದು ಪ್ರತಿಯೊಬ್ಬನು ತಾನು ಹೊಂದಿದ ಕೃಪಾವರವನ್ನು ಎಲ್ಲರ ಸೇವೆಯಲ್ಲಿ ಉಪಯೋಗಿಸಲಿ. ಒಬ್ಬನು ಬೋಧಿಸುವವನಾದರೆ ದೈವೋಕ್ತಿಗಳನ್ನು ನುಡಿಯುವವನಾಗಿ ಬೋಧಿಸಲಿ. ಒಬ್ಬನು ಸಭೆಯ ಸೇವೆ ಮಾಡುವವನಾದರೆ ದೇವರಿಂದ ಶಕ್ತಿಯನ್ನು ಹೊಂದಿದವವನಾಗಿ ಮಾಡಲಿ. ಇದರಿಂದ ಎಲ್ಲಾದರಲ್ಲಿ ಯೇಸು ಕ್ರಿಸ್ತನ ಮೂಲಕ ದೇವರಿಗೆ ಸ್ತೋತ್ರ ಉಂಟಾಗುವದು. ಯೇಸು ಕ್ರಿಸ್ತನಿಗೆ ಅಧಿಪತ್ಯವೂ ಘನವೂ ಯುಗ ಯುಗಾಂತಗಳಲ್ಲಿಯೂ ಇರುವವು.** 1 ಪೇತ್ರ 4:10, 11

ದೇವರು ಕೃಪಾವರಗಳನ್ನು ತನ್ನ ವಿಶ್ವಾಸಿಗಳಿಗೆ ವಿತರಿಸುವ ಕಾರಣವೇನೆಂದರೆ ಈ ಕೃಪಾವರಗಳಿಂದ ಅವರು ಒಬ್ಬರಿಗೊಬ್ಬರು ಸೇವೆ ಸಲ್ಲಿಸುವಂತೆ ಉಪಯೋಗವಾಗುತ್ತದೆ. ಈ ಕಾರಣದಿಂದ ವಿಶ್ವಾಸಿಗಳು ಸ್ಥಳೀಯ ಸಭೆಯಲ್ಲಿ ನಾನಾ ವಿಧವಾಗಿ ತಮ್ಮ ವರಗಳನ್ನು ಕಾರ್ಯರೂಪಕ್ಕೆ ತರುವಂತೆ ಅವಕಾಶವನ್ನು ಒದಗಿಸಬೇಕು ಇದರಿಂದ ಏಕಕಾಲದಲ್ಲಿ ನಡತೆಯ ಬೆಳವಣಿಗೆ ಮತ್ತು ಪರಿಪಕ್ವತೆ ಖಚಿತವಾಗುವಂತೆ ನೋಡಿಕೊಳ್ಳಬೇಕು, ಮತ್ತು ಅಧಿಕಾರಕ್ಕೆ ಸರಿಯಾಗಿ ಒಳಪಡುವುದು ಮತ್ತು ದರ್ಶನಕ್ಕೆ ಅಂಟಿಕೊಂಡು ಜೀವಿಸುವುದು ಮತ್ತು ಸ್ಥಳೀಯ ಸಭೆಯ ಮಾರ್ಗ ದರ್ಶನದಲ್ಲಿ ನಡೆಯುವುದು. ಈ ವಿಷಯಗಳನ್ನು

ಖಚಿತಪಡಿಸಬೇಕು, ಹೇಗಿದ್ದರು ನನ್ನ ಗಮನ ಸೆಳೆಯುವ ವಿಷಯವೇನೆಂದರೆ ಅನೇಕ ಸಭೆಗಳಲ್ಲಿ ಸೇರಿ ಬರುವ ಬಹಳಷ್ಟು ಜನರಿಗೆ ತಮ್ಮಲಿರುವ ವರಗಳನ್ನು ಕಂಡುಹಿಡಿದು ಅವುಗಳನ್ನು ಕಾರ್ಯ ರೂಪಕ್ಕೆ ತರುವಂತೆ ಉತ್ತೇಜನಗೊಳಿಸುತ್ತಾ ಇಲ್ಲ ಅಥವಾ ಸಭೆಯಲ್ಲಿ ಕೆಲವರಿಗೆ ತಮ್ಮ ಕೃಪಾವರಗಳು ಏನೆಂದು ತಿಳಿದಿದ್ದರು ಅವುಗಳನ್ನು ಉಪಯೋಗಿಸಲು ಸರಿಯಾದ ಅವಕಾಶ ಮಾಡಿಕೊಡುತ್ತಾ ಇಲ್ಲ. ನಡತೆಯ ಬೆಳವಣಿಗೆ, ಪರಿಪಕ್ವತೆ, ಮತ್ತು ಸಮರ್ಪಣೆಯ ಜೀವಿತ ಇವುಗಳನ್ನು ಗುರುತಿಸಿ ಕೆಲವೇ ವಿಶ್ವಾಸಿಗಳು ತರಬೇತಿ ಪಡೆದಿದ್ದಾರೆ ಮತ್ತು ಸಭೆಯಲ್ಲಿರುವ ಇನ್ನು ಅನೇಕರು ಯಾವುದೇ ಸೇವಾ ಕಾರ್ಯವಿಲ್ಲದೆ ಬಿಡಲ್ಪಟ್ಟಿದ್ದಾರೆ.

ಇದು ಬದಲಾವಣೆಯಾಗಬೇಕು ಮತ್ತು ಸ್ಥಳೀಯ ಸಭೆಯಲ್ಲಿ ಪ್ರತಿವಿಶ್ವಾಸಿಗಳು ಸೇವಾ ಕಾರ್ಯಗಳಲ್ಲಿ ತೊಡಗಬೇಕು. ಉದಾಹರಣೆಗಾಗಿ ಒಂದು ಸಭೆಯಲ್ಲಿ 100 ಜನರಿದ್ದರೆ, 20 ಜನರು ಮಾತ್ರ ತಮ್ಮ ವರಗಳನ್ನು ಗುರುತಿಸಿ ಅವುಗಳನ್ನು ಕಾರ್ಯರೂಪದಲ್ಲಿ ಸೇವೆಸಲ್ಲಿಸುತ್ತಿದ್ದರೆ. ಅಂತ ಸಭೆಯು 20% ರಷ್ಟು ಮಾತ್ರ ಕಾರ್ಯದ ಪಲಿತಾಂಶವನ್ನು ಹೊಂದಲು ಸಾದ್ಯ ಮತ್ತು ಉಳಿದ 80% ರಷ್ಟು ಯಾವುದೇ ಸೇವಾ ಕಾರ್ಯವಿಲ್ಲದೆ ಆಲಸಿಕೆಯಿಂದ ಉಳಿಯುತ್ತದೆ.

**ದೇಹವೆಲ್ಲಾ ಆತನ ದೊರೆತನದಲ್ಲಿದ್ದು ತನ್ನಲ್ಲಿರುವ ಎಲ್ಲಾ ನರಗಳಿಂದ ಬಿಗಿಯಾಗಿ ಜೋಡಿಸಲ್ಪಟ್ಟು, ಪ್ರತಿ ಅಂಗದಿಂದ ಅದರದರ ಶಕ್ತಿಯ ಪ್ರಕಾರ ಸಹಾಯ ಹೊಂದಿ ಪ್ರೀತಿಯಿಂದ ಐಕ್ಯವಾಗಿದ್ದು ಕ್ಷೇಮಾಭಿವೃದ್ಧಿಯನ್ನು ಹೊಂದುತ್ತದೆ.** ಎಫೆಸ 4:16

ಪ್ರತಿಯೊಬ್ಬರು ತಮಗೆ ಕೊಡಲ್ಪಟ್ಟಂತ ಕಾರ್ಯಗಳನ್ನು ನಡೆಸುವಾಗ ದೇಹವು (ಸಭೆಯು) ಬೆಳೆದು ಕ್ರಿಸ್ತನ ಪ್ರೀತಿ ಮತ್ತು ಪರಿಪಕ್ವತೆಯಲ್ಲಿ ಅಭಿವೃದ್ಧಿ ಹೊಂದುತ್ತದೆ. ಈ ಕಾರಣದಿಂದ ಪ್ರತಿ ವಿಶ್ವಾಸಿಯು ತರಬೇತಿಹೊಂದಿ ಸೇವೆಯಲ್ಲಿ ಬಿಡುಗಡೆಗೊಳ್ಳುವಂತದ್ದು ಅಗತ್ಯವಾದ ಅಂಶವಾಗಿದೆ.

## ಕೆಲ ವಿಶ್ವಾಸಿಗಳು ವ್ಯಾಪಾರೋದ್ಯಮ ಸ್ಥಳಗಳಲ್ಲಿ ಸೇವೆಸಲ್ಲಿಸುವಂತೆ ಕರೆಯಲ್ಪಟ್ಟಿದ್ದಾರೆ

ಕೆಲ ವಿಶ್ವಾಸಿಗಳಿಗೆ ಸೇವಾ ಸ್ಥಳವು ಸಭೆಯಲ್ಲಿ ಎಲ್ಲರ ಮುಂದೆ ಪ್ರಸಂಗಿಸುವುದು ಇಲ್ಲದಿರಬಹುದು ಆದರೆ ಸಭೆಯ ಹೊರಗಡೆ ಅಂದರೆ ಮಾರುಕಟ್ಟೆಯ ವ್ಯಾಪಾರ

ಸ್ಥಳಗಳಲ್ಲಿ, ಸರ್ಕಾರದ ಆಡಳಿತವರ್ಗಗಳಲ್ಲಿ, ಶಾಲಾ ಕಾಲೇಜುಗಳಲ್ಲಿ, ಮನರಂಜನೆ ಸ್ಥಳದಲ್ಲಿ, ಕಲೆಯಲ್ಲಿ, ಮಾಧ್ಯಮಗಳಲ್ಲಿ, ಆಟೋಟಗಳಲ್ಲಿ ಮತ್ತು ವಾಣಿಜ್ಯ ಸ್ಥಳಗಳಾದ ಇತರೆ ಸ್ಥಳಗಳಲ್ಲಿ ಸೇವೆ ಸಲ್ಲಿಸಬಹುದು.

ನಾವು ಒಂದನ್ನು ಅರ್ಥಮಾಡಿಕೊಳ್ಳಬೇಕು ಅದೇನೆಂದರೆ ಜನರು ಎಲ್ಲಿರುತ್ತಾರೋ ಅದೇ ನಮ್ಮ ಸೇವ ಸ್ಥಳ, ಒಂದು ವೇಳೆ ಸ್ಥಳೀಯ ಸಭೆಯ ಒಳಗಡೆ ಅಥವಾ ಹೊರಗಡೆ ಆಗಿರಬಹುದು, ಈ ರೀತಿಯಾಗಿ ಅನೇಕ ವಿಶ್ವಾಸಿಗಳು ಸ್ಥಳೀಯ ಸಭೆಯ ಹೊರಗಡೆ ಇದ್ದು ಸೇವೆ ಸಲ್ಲಿಸುವಂತೆ ಕೃಪಾ ವರಗಳನ್ನು ಹೊಂದಿರುತ್ತಾರೆ. ಇದರಿಂದ ಅವರು ಸ್ಥಳೀಯ ಸಭೆಗೆ ಒಳಪಟ್ಟಿಲ್ಲ ಅಥವಾ ಅವರ ಸೇವೆ ಸ್ಥಳೀಯ ಸಭೆಗೆ ಸಂಬಂದಿಸಲ್ಪಟ್ಟಿಲ್ಲ ಎಂದರ್ಥವಲ್ಲ. ಸ್ಥಳೀಯ ಸಭೆಯು ಅವರು ಬಲಹೊಂದಿ ಸಜ್ಜು ಗೊಳಿಸಲ್ಪಡುವ ಸ್ಥಳವಾಗಿರುತ್ತವೆ, ಮತ್ತು ಸ್ಥಳೀಯ ಸಭೆಯು ಅಂತ ವಿಶ್ವಾಸಿಗಳಿಗೆ ಆತ್ಮೀಕ ಪೋಷಣೆ, ಆಲೋಚನೆ ಮತ್ತು ಮಾರ್ಗದರ್ಶನವನ್ನು ಕೊಡುವ ಸ್ಥಳವಾಗಿರುತ್ತದೆ. ಹೇಗಿದ್ದರು ಸೇವೆಯ ಅದರ ಪ್ರಾಮುಖ್ಯವಾದ ಸ್ಥಳವು ಸ್ಥಳೀಯ ಸಭೆಯ ಹೊರಗಣದಲ್ಲಿ ಅಂದರೆ ಲೋಕದ ನಾನಾಕಡೆಯಲ್ಲಿರುವ ಮಾರುಕಟ್ಟೆಯ ಸ್ಥಳಗಳಲ್ಲಿ ಅವರು ಕೆಲಸಗಾರರಾಗಿರಬಹುದು, ವ್ಯಾಪಾರಸ್ಥರಾಗಿರಬಹುದು, ರಾಜಕೀಯ ವ್ಯಕ್ತಿಗಳಾಗಿರ ಬಹುದು, ಅಥವಾ ಉಪನ್ಯಾಸಕರಾಗಿಬಹುದು ಮತ್ತು ಇತರೆ. ಇವರು ಸಭೆಯ ಪ್ರಾರ್ಥನಾ ಗುಂಪುಗಳನ್ನು ಮತ್ತು ಸಭೆಯ ಇತರೆ ಕಾರ್ಯಗಳನ್ನು ಮಾರುಕಟ್ಟೆಯ ಸ್ಥಳಗಳಲ್ಲಿ ನಡೆಸಲು ಸಾಮಾರ್ಥ್ಯರಾಗಿರುತ್ತಾರೆ.

ಆದಿ ಸಭೆಯ ವಿಶ್ವಾಸಿಗಳು ಯೆರುಸಲೇಮಿನಿಂದ ಬಹಳ ಹಿಂಸೆಗೆ ಒಳಪಟ್ಟು ನಾನಾ ಸ್ಥಳಗಳಿಗೆ ಚದುರಿಸಲ್ಪಟ್ಟರು ಯಾವ ಸ್ಥಳಗಳಿಗೆ ಅಪೋಸ್ತಲರು ಮತ್ತು ನಾಯಕರು ಹೋಗಿರಲಿಲ್ಲವೋ ಅಂತ ಸ್ಥಳಗಳಿಗೆ ಈ ವಿಶ್ವಾಸಿಗಳು ಹೋಗಿ ಕ್ರಿಸ್ತನನ್ನು ಸಾರಿದರು (ಅ. ಕೃ 8, 11) ಇದರಿಂದ ನೂತನವಾದಂತ ಪಟ್ಟಣಗಳಿಗೆ, ಮತ್ತು ನಗರಗಳಿಗೆ ಕ್ರಿಸ್ತನ ಸುವಾರ್ತೆ ಸಾರಲ್ಪಟ್ಟಿತು, ಮತ್ತು ಅನೇಕ ಸಭೆಗಳು ಸಾಮಾನ್ಯವಾದ ವಿಶ್ವಾಸಿಗಳಿಂದ ಸ್ಥಾಪಿಸಲ್ಪಟ್ಟವು! ಸೇವಾ ಕಾರ್ಯಕ್ಕೆ ಅಡಿಪಾಯವು ಸಿದ್ದಮಾಡಲ್ಪಟ್ಟಾಗ, ಅಪೋಸ್ತಲರು ಯೆರುಸಲೇಮಿನಿಂದ ಕೆಲವು ಜನರನ್ನು ಕಳುಹಿಸಿ ಆ ಸ್ಥಳಗಳಲ್ಲಿನ ಸೇವೆಯನ್ನು ಬಲಪಡಿಸಿದರು.

ಈ ರೀತಿಯಾದ ಕಾರ್ಯವು ಇಂದು ಕೂಡ ನಡೆಯಲು ಸಾದ್ಯ. ವಿಶ್ವಾಸಿಗಳ ಚಳುವಳಿಯಲ್ಲಿ, ಮಾರುಕಟ್ಟೆಯ ನಾನಾ ಸ್ಥಳಗಳಲ್ಲಿ ವಿಶ್ವಾಸಿಗಳು ದೇವರಿಂದ ಉಪಯೋಗಿಸಲ್ಪಟ್ಟು ಆತನ ರಾಜ್ಯವನ್ನು ವಿಸ್ತರಿಸುತ್ತಾರೆ. ಇದರಿಂದ ಯಾವ ಸ್ಥಳಗಳಿಗೆ ಪೂರ್ಣ ಸಮಯ ಸೇವಕರು ಹೋಗಲು ಸಾದ್ಯವಾಗಲಿಲ್ಲವೋ ಅಂತ ಸ್ಥಳಗಳಿಗೆ ನೇರ ಪ್ರವೇಶ ಸಾದ್ಯವಾಗುತ್ತದೆ, ಹೀಗಿರುವುದರಿಂದ ಇದು ತಿಳಿಸುವುದೇನೆಂದರೆ ನಮ್ಮ ಕೆಲಸದ ಅರ್ಥವನ್ನು ರೂಪಾಂತರಗೊಳಿಸಿ ಮಾರುಕಟ್ಟೆಯ ಸ್ಥಳಗಳಲ್ಲಿ ಕ್ರೈಸ್ತ ವಿಶ್ವಾಸಿಗಳಿಗಿರುವ ಕರ್ತವ್ಯವನ್ನು ಗಮನಿಸುವಂತದ್ದು.

## ವಿಶ್ವಾಸಿಗಳು ಪರಿಶುದ್ದಾತ್ಮನ ಅದ್ಬುತ ಶಕ್ತಿಯನ್ನು ಪ್ರದರ್ಶಿಸಲು ಪ್ರಾರಂಬಿಸುತ್ತಾರೆ

ಐದು ಸೇವಾ ಕಾರ್ಯಗಳನ್ನು ನಡೆಸುವ ಸೇವಕರುಗಳಂತೆಯೇ, ವಿಶ್ವಾಸಿಗಳು ಪರಿಶುದ್ದಾತ್ಮನ ಅದ್ಬುತ ಶಕ್ತಿಯಲ್ಲಿ ನಡೆಯಲು ಪ್ರಾರಂಬಿಸುತ್ತಾರೆ ಮತ್ತು ಪರಿಶುದ್ದಾತ್ಮನ ವರಗಳಿಂದ ತುಂಬಿಸಲ್ಪಟ್ಟು ಆತನ ಅದ್ಬುತ ಶಕ್ತಿಯನ್ನು ತೋರಿಸುತ್ತಾರೆ.

**ನಿಮಗೆ ನಿಜ ನಿಜವಾಗಿ ಹೇಳುತ್ತೇನೆ, ನನ್ನನ್ನು ನಂಬುವವನು ನಾನು ನಡಿಸುವ ಕ್ರಿಯೆಗಳನ್ನು ತಾನೂ ನಡಿಸುವನು; ಮತ್ತು ಅವುಗಳಿಗಿಂತ ಮಹತ್ತಾದ ಕ್ರಿಯೆಗಳನ್ನು ನಡಿಸುವನು. ಯಾಕೆಂದರೆ ನಾನು ತಂದೆಯ ಬಳಿಗೆ ಹೋಗುತ್ತೇನೆ.** ಯೋಹಾನ 14:12

ಕ್ರಿಸ್ತನು ಭೂಮಿಯ ಮೇಲಿದ್ದಾಗ ಬಯಸಿದ್ದೇನೆಂದರೆ ಎಲ್ಲಾ ವಿಶ್ವಾಸಿಗಳು ಎಲ್ಲಾ ಸ್ಥಳಗಳಲ್ಲಿ ಸೂಚನೆಗಳನ್ನು, ಅದ್ಬುತಗಳನ್ನು, ಮಹತ್ಕಾರ್ಯಗಳನ್ನು ಮಾಡುವಂತವರಾಗಬೇಕು ಎಂದು. ಸೂಚನೆಗಳು, ಅದ್ಬುತಗಳು ಮತ್ತು ಮಹತ್ಕಾರ್ಯಗಳು ಕೇವಲ ಆದಿಸಭೆಗೆ ಸೀಮಿತವಾಗಿದೆ ಎಂಬುದಾಗಿ ಕ್ರಿಸ್ತನು ಎಂದಿಗೂ ಹೇಳಲಿಲ್ಲ. ಪ್ರತಿ ವಿಶ್ವಾಸಿಗಳು ತಂದೆಯ ಕಾರ್ಯಗಳನ್ನು ನಡಿಸಿ, ಅನೇಕ ಜೀವಿತಗಳನ್ನು ಸ್ಪರ್ಷಿಸಿ, ದೇವರ ಪ್ರೀತಿಯನ್ನು ಪ್ರದರ್ಶಿಸಿ, ಮತ್ತು ತಂದೆಯನ್ನು ಮಹಿಮೆ ಪಡಿಸಬೇಕೆಂಬುದೆ ಆತನ ಪರಿಪೂರ್ಣವಾದ ಉದ್ದೇಶವಾಗಿದೆ. ಪವಿತ್ರಾತ್ಮನ 9 ವರಗಳು (1 ಕೋರಿಂಥ 12: 4–11) ಎಲ್ಲಾ

ವಿಶ್ವಾಸಿಗಳಿಗೆ ದೊರಕುವಂತವುಗಳು, ಇವು ಕೇವಲ ಐದು ಸೇವಾ ಕಾರ್ಯಗಳನ್ನು ನಡೆಸುವ ಸೇವಕರಿಗೆ ಸೀಮಿತವಾಗಿಲ್ಲ.

ವಿಶ್ವಾಸಿಗಳ ಚಳುವಳಿಯಲ್ಲಿ, ಪ್ರತಿ ವಿಶ್ವಾಸಿಗಳು ತಂದೆಯ ಕಾರ್ಯಗಳನ್ನು ಮಾಡುತ್ತಾ ಸೂಚಕ ಕಾರ್ಯಗಳನ್ನು, ಅದ್ಭುತಗಳನ್ನು, ಮಹತ್ಕಾರ್ಯಗಳನ್ನು ಪರಿಶುದ್ಧಾತ್ಮನ ವರಗಳಿಂದ ಪ್ರದರ್ಶಿಸುವುದನ್ನು ನಾವು ನೋಡಲಿದ್ದೇವೆ. ಇದು ಪ್ರತಿ ವಿಶ್ವಾಸಿಗೆ ಸಾದಾರಣವಾಗಿ ಕಂಡು ಬರುವಂತದ್ದಾಗಿದೆ.

ತಂದೆಯ ಕಾರ್ಯಗಳನ್ನು ಮಾಡುವ ಮತ್ತು ಪರಿಶುದ್ಧಾತ್ಮನ ವರಗಳನ್ನು ಪ್ರದರ್ಶಿಸುವ ವಿಶ್ವಾಸಿಗಳು ವಿಲಕ್ಷಣವಾಗಿ ಕಾಣಿಸುವುದಿಲ್ಲ. ಯಾರು ಸೂಚಕ ಕಾರ್ಯಗಳನ್ನು, ಅದ್ಭುತಗಳನ್ನು ಮತ್ತು ಮಹಾತ್ಕಾರ್ಯಗಳನ್ನು ಪ್ರದರ್ಶಿಸುವುದಿಲ್ಲವೋ ಅವರು ವಿಲಕ್ಷಣವಾಗಿ ಕಂಡುಬರುವಂತವರು!

## ಕೆಲ ವಿಶ್ವಾಸಿಗಳು ಲೋಕದಲ್ಲಿನ ತಮ್ಮ ಕೆಲಸ ಕಾರ್ಯಗಳ ಜೊತೆಯಲ್ಲಿ ಐದು ಸೇವಾ ಕಾರ್ಯಗಳಲ್ಲಿ ನಿರತರಾಗಿರುತ್ತಾರೆ

ಇದಕ್ಕಾಗಿ ಸಿದ್ಧರಾಗಿರಿ! ಯಾರು 5 ಸೇವಾ ಕಾರ್ಯಗಳನ್ನು ಮಾಡಲು ಕರೆಯಲ್ಪಟ್ಟಿರುತ್ತಾರೋ ಅಂದರೆ ಅಪೋಸ್ತಲರು, ಪ್ರವಾದಿಗಳು, ಸಭಾ ಪಾಲಕರು, ಬೋದಕರು ಮತ್ತು ಸುವಾರ್ತಿಕರು, ಇಂತವರೇ ಪೂರ್ಣ ಸಮಯ ಸೇವೆಯಲ್ಲಿ ನಿರತರಾಗಿರಬೇಕು ಎಂದು ಸತ್ಯವೇದ ಎಂದಿಗೂ ಹೇಳುವುದಿಲ್ಲ.

ಪೌಲನು ಅಪೋಸ್ತಲನಾಗಿದ್ದಾಗಲು ಗುಡಾರಗಳನ್ನು ಸಿದ್ದಮಾಡುವ ವ್ಯಾಪಾರದಲ್ಲಿ ತೊಡಗಿದ್ದನು. ಇದು ಐದು ಸೇವಾ ಕಾರ್ಯಗಳ ಕರೆಯಿಂದ ಅವನನ್ನು ಅನರ್ಹನನ್ನಾಗಿ ಮಾಡಲಿಲ್ಲ.

ವಿಶ್ವಾಸಿಗಳ ಚೆಳುವಳಿಯಲ್ಲಿ ನಾವು ನೋಡಲಿಕ್ಕಿರುವ ಸಂಗತಿ ಏನೆಂದರೆ ಅಪೋಸ್ತಲರು, ಪ್ರವಾದಿಗಳು ಮತ್ತು ಐದು ಸೇವಾ ಕಾರ್ಯಗಳನ್ನು ಸಡೆಸುವ ಸೇವಕರುಗಳು ಒಟ್ಟಾಗಿ ಸೇರಿ ಮಾರುಕಟ್ಟೆಗಳಲ್ಲಿ, ವ್ಯಾಪಾರ ಸ್ಥಳಗಳಲ್ಲಿ, ರಾಜಕೀಯ

ಸ್ಥಳಗಳಲ್ಲಿ, ಮನರಂಜನಾ ಮತ್ತು ಕಲಾ ಸ್ಥಳಗಳಲ್ಲಿ ಶಾಲಾ ಕಾಲೇಜುಗಳಲ್ಲಿ ಮತ್ತು ಇತರೇ ಸ್ಥಳಗಳಲ್ಲಿ ಸೇವೆ ಸಲ್ಲಿಸುವಂತವರಾಗುತ್ತಾರೆ.

## ದೇವರು ಯಾವುದನ್ನು ವಿಶ್ವಾಸಿಗಳ ಮೂಲಕ ಬಿಡುಗಡೆಗೊಳಿಸುತ್ತಾನೊ ಅದಕ್ಕೆ ಲಿಂಗಬೇಧವಾಗಲಿ ಮತ್ತು ವಯಸ್ಸಾಗಲಿ ಅಡ್ಡಿಯಾಗಿರುವುದಿಲ್ಲ

**ಕಡೇ ದಿವಸಗಳಲ್ಲಿ ನಾನು ಎಲ್ಲಾ ಮನುಷ್ಯರ ಮೇಲೆ ನನ್ನ ಆತ್ಮವನ್ನು ಸುರಿಸುವೆನು; ನಿಮ್ಮಲ್ಲಿರುವ ಗಂಡಸರೂ ಹೆಂಗಸರೂ ಪ್ರವಾದಿಸುವರು; ನಿಮ್ಮ ಯೌವನಸ್ಥರಿಗೆ ದಿವ್ಯದರ್ಶನಗಳಾಗುವವು; ನಿಮ್ಮ ಹಿರಿಯರಿಗೆ ಕನಸುಗಳು ಬೀಳುವವು; ಇದಲ್ಲದೆ ಆ ದಿನಗಳಲ್ಲಿ ನನ್ನ ದಾಸ ದಾಸಿಯರ ಮೇಲೆಯೂ ನನ್ನ ಅತ್ಮವನ್ನು ಸುರಿಸುವೆನು; ಅವರೂ ಪ್ರಾವಾದಿಸುವರು.** ಆಪೂಸ್ತಲರ ಕೃತ್ಯಗಳು 2: 17, 18.

ಯಾವುದೇ ವಯಸ್ಸಿನವರಾಗಲಿ ಅಥವಾ ಯಾವುದೇ ಲಿಂಗ ಬೇದವನ್ನು ಲಕ್ಷಿಸದೆ ಪವಿತ್ರಾತ್ಮನು ಎಲ್ಲಾ ಜನಗಳ ಮೇಲೆ ಸುರಿಸಲ್ಪಡುವನು. ವಿಶ್ವಾಸಿಗಳ ಚಳುವಳಿಯಲ್ಲಿ ಇದು ಮಹತ್ತರವಾದ ಅಳತೆಯಲ್ಲಿ ನಡೆಯುವಂತೆ ನಾವು ನೋಡುತ್ತೇವೆ. ಚಿಕ್ಕ ಪ್ರಾಯದ ಯೌವನಸ್ಥರು ಪ್ರಸಂಗಿಸುವುದರಲ್ಲಿ, ಪ್ರವಾದಿಸುವುದರಲ್ಲಿ ಕ್ರಿಸ್ತನ ನಡತೆಯನ್ನು ಪ್ರದರ್ಶಿಸುವುದರಲ್ಲಿ ಮತ್ತು ಮಹತ್ಕಾರ್ಯಗಳಲ್ಲಿ, ಸೂಚಕ ಕಾರ್ಯಗಳಲ್ಲಿ, ಅದ್ಭುತ ಕಾರ್ಯಗಳನ್ನು ಮಾಡುವುದರಲ್ಲಿ ಸಿದ್ಧಿಗೆ ಬರುತ್ತಾರೆ. ಇದು ಸಾಮಾನ್ಯವಾಗಿ ನಡೆಯುವಂತ ಸಂಗತಿಯಾಗಿದೆ. ಇದನ್ನು ಕಲಿತುಕೊಳ್ಳಲು ಹಳೆಯ ವಂಶಾವಳಿಗೆ ಅನೇಕ ವರ್ಷಗಳು ತೆಗೆದು ಕೊಂಡಿತು. ಆದರೆ ಯುವಜನತೆಯ ಈ ನೂತನ ವಂಶಾವಳಿಯು ಅತೀ ಬೇಗನೆ ಕಲಿತುಕೊಳ್ಳುತ್ತದೆ. ಹಳೆಯ ವಂಶಾವಳಿಯ ಅಸ್ತಿವಾರಗಳ ಮೇಲೆ ಅವರು ಕಟ್ಟುತ್ತಾರೆ. ಯುವಕರು, ವಯಸ್ಕರು, ಸ್ತ್ರೀ ಪುರುಷರು ಎಲ್ಲರೂ ದೇವರ ಕರೆಯನ್ನು ಅತೀ ದಾಹವುಳ್ಳವರಾಗಿ ಜ್ಞಾನದಿಂದ ಮತ್ತು ಉತ್ಸಾಹದಿಂದ ಹಿಂಬಾಲಿಸುತ್ತಾರೆ.

# 3

# ಐದು ಸೇವಾ ಕಾರ್ಯ ನಡೆಸುವ ಸೇವಕರ ಕರ್ತವ್ಯ

ವಿಶ್ವಾಸಿಗಳ ಚಳುವಳಿಯು ಐದು ಸೇವಾ ಕಾರ್ಯಗಳನ್ನು ನಡೆಸುವ ಸೇವಕರುಗಳ ಕರ್ತವ್ಯಗಳಲ್ಲಿ ಮಹತ್ತರವಾದಂತ ಬದಲಾವಣೆಯನ್ನು ಉಂಟುಮಾಡುತ್ತದೆ. 5 ಸೇವಾ ಕಾರ್ಯಗಳನ್ನು ನಡೆಸುವ ಸೇವಕರು ಪೂರ್ಣ ಬೆಳವಣಿಗೆ ಮತ್ತು ಪರಿಪಕ್ವತೆಯ ಹಂತಕ್ಕೆ ಬಂದು ತಮ್ಮ ಸೇವೆಯ ಪ್ರಾಮುಖ್ಯವಾದ ಅಂಶದ ಕಡೆಗೆ ಗಮನಹರಿಸುತ್ತಾರೆ ಅದೇನೆಂದರೆ ವಿಶ್ವಾಸಿಗಳನ್ನು ಸೇವಾ ಕಾರ್ಯಗಳಿಗೆ ಸಜ್ಜುಗೊಳಿಸಬೇಕು. ಇದರಿಂದ ಕ್ರಿಸ್ತನ ದೇಹವು (ಸಭೆ) ಅಭಿವೃದ್ಧಿ ಹೊಂದುತ್ತದೆ.

## ಐದು ಸೇವಾ ಕಾರ್ಯದಲ್ಲಿ ನಮ್ಮ ಕರ್ತವ್ಯ

ಐದು ಸೇವಾ ಕಾರ್ಯವನ್ನು ನಡೆಸುವ ಸೇವಕರ ಕರ್ತವ್ಯ ಏನು ಎಂದು ನಾವು ಅರ್ಥ ಮಾಡಿಕೊಂಡು ಈ ಮುಂದಿನ ಸಂಗತಿಗಳನ್ನು ವಿಶ್ವಾಸಿಗಳಿಗೆ ಒದಗಿಸಬೇಕು.

### ವಿಶ್ವಾಸಿಗಳನ್ನು ಪರಿಪಕ್ವತೆಯ ಹಂತಕ್ಕೆ ಅಂದರೆ ಕ್ರಿಸ್ತನ ಸ್ವರೂಪಕ್ಕೆ ನಡೆಸತಕ್ಕದ್ದು

ನಮ್ಮ ಸೇವೆಯ ಗುರಿಯು ಜನರನ್ನು ಮನರಂಜನೆಗೊಳಿಸುವುದಲ್ಲ, ಅಥವಾ ಸುಮ್ಮನೆ ಶಿಕ್ಷಣ ಕೊಡುವುದಲ್ಲ ಆದರೆ ವಿಶ್ವಾಸಿಗಳನ್ನು ಪರಿಪಕ್ವತೆಯ ಹಂತಕ್ಕೆ ನಡೆಸಿ ಅವರು ಕ್ರಿಸ್ತನ ಸ್ವಾರೂಪ್ಯದಲ್ಲಿ ಅಂದರೆ ಆತನ ನಡತೆ ಮತ್ತು ಸೇವೆಯನ್ನು ಪ್ರತಿಬಿಂಬಿಸುವುದು.

ದೇವರ ಉದ್ದೇಶವೇನೆಂದರೆ ನಾವು ಆತನ ಮಗನ ಸ್ವರೂಪ್ಯವುಳ್ಳವರಾಗಬೇಕೆಂಬುದೆ (ರೋಮಾ 8: 29). ನಾವು ಕ್ರಿಸ್ತನ ಪರಿಪೂರ್ಣತೆಯ ಪ್ರಮಾಣಕ್ಕೆ ಮುಟ್ಟುವ ತನಕ ಅಂದರೆ ಎಲ್ಲಾ ಕಾರ್ಯಗಳಲ್ಲಿ ಆತನ ಹಾಗೆ ಕಂಡುಬರುವವರೆಗೂ ಅಭಿವೃದ್ಧಿ ಹೊಂದಬೇಕು.

ಅಪೋಸ್ತಲನಾದ ಪೌಲನ ಸೇವೆಯ ಶೀರ್ಷಿಕೆ ಹೀಗಿತ್ತು: ಕೊಲೋ 1: 28–29 ಸೇವೆಯಲ್ಲಿ ನಮ್ಮ ಕರ್ತವ್ಯ ಏನೆಂದರೆ ಎಲ್ಲರನ್ನು ಕ್ರಿಸ್ತನಲ್ಲಿ ಪ್ರವೀಣರನ್ನಾಗಿ ನಿಲ್ಲಿಸಿ ಪರಿಪಕ್ವತೆಗೆ ನಡೆಸುವ ಒಪ್ಪಂದದಲ್ಲಿರಬೇಕು.

## ವಿಶ್ವಾಸಿಗಳನ್ನು ದೇವರ ವಾಕ್ಯದಲ್ಲಿ ಅಂದರೆ ಪುನರ್ಸ್ಥಾಪಿಸಲ್ಪಟ್ಟ ವರ್ತಮಾನಕಾಲದ ಸತ್ಯಾಂಶದಲ್ಲಿ ಸಜ್ಜುಗೊಳಿಸಬೇಕು

ತನ್ನ ಕೊನೆಯ ಮಾತುಗಳಿಂದ ಎಫೆಸ ಸಭೆಯ ಹಿರಿಯರಿಗೆ ಪೌಲನು ಹೇಳಿದ್ದೇನೆಂದರೆ ನಾನೀಗ ನಿಮ್ಮನ್ನು ಕರ್ತನಿಗೂ ಆತನ ಕೃಪಾ ವಾಕ್ಯಕ್ಕೂ ಒಪ್ಪಿಸಿಕೊಡುತ್ತೇನೆ. ಆತನು ನಿಮ್ಮಲ್ಲಿ ಭಕ್ತಿವೃದ್ಧಿಯನ್ನುಂಟುಮಾಡುವದಕ್ಕೂ ಪವಿತ್ರರಾದವರೆಲ್ಲರಲ್ಲಿ ಹಕ್ಕನ್ನು ಅನುಗ್ರಹಿಸುವದಕ್ಕೂ ಶಕ್ತನಾಗಿದ್ದಾನೆ. (ಅ. ಕೃ 20: 32) ದೇವರ ವಾಕ್ಯವು ಜನರನ್ನು ಪ್ರವೀಣಗೊಳಿಸಲು ಶಕ್ತಿಯುತವಾಗಿದೆ. ದೇವರ ವಾಕ್ಯವು ಚಿಕ್ಕಮಕ್ಕಳನ್ನು ಕುಮಾರ, ಕುಮಾರಿಯರು ಸ್ವಾಸ್ಥ್ಯಕ್ಕೆ ಬಾದ್ಯರಾಗುವಂತೆ ಅಭಿವೃದ್ಧಿಗೊಳಿಸುತ್ತದೆ. ಐದು ಸೇವಾ ಕಾರ್ಯಗಳನ್ನು ನಡೆಸುವ ಸೇವಕರಾದ ನಾವು ವಿಶ್ವಾಸಿಗಳನ್ನು ದೇವರ ವಾಕ್ಯದಲ್ಲಿ ಕಟ್ಟಿ ಅವರು ತಮ್ಮ ಸ್ವಾಸ್ಥ್ಯಕ್ಕೆ ಭಾದ್ಯರಾಗುವಂತೆ ನಡೆಸಬೇಕು. ಕ್ರಿಸ್ತನ ದೇಹಕ್ಕೆ ಅಂದರೆ ಸಭೆಗೆ ಪುನರ್ಸ್ಥಾಪಿಸಲ್ಪಟ್ಟ ಎಲ್ಲಾ ಸತ್ಯಾಂಶಗಳಲ್ಲಿ ಅವರು ಅಭಿವೃದ್ಧಿ ಕಾಣುವಂತೆ ಮಾಡಬೇಕು.

ನಾವು ವೈಯಕ್ತಿಕವಾಗಿ ಏನನ್ನು ಪಡಕೊಂಡಿದ್ದೇವೋ ಅದನ್ನೇ ಹೊರತು ಇನ್ನೂ ಹೆಚ್ಚಾದ ಪ್ರಕಟನೆಯನ್ನು ಕೊಡಲು ಆಗುವುದಿಲ್ಲ. ನಾವು ಯಾವುದನ್ನು ವೈಯಕ್ತಿಕವಾಗಿ ಅನುಭವಿಸಲಿಲ್ಲವೋ ಅದನ್ನು ವಿತರಿಸಲು ಕೂಡ ಆಗುವುದಿಲ್ಲ. ಐದು ಸೇವಾ ಕಾರ್ಯಗಳನ್ನು ನಡೆಸುವ ಸೇವಕರುಗಳಿಗೆ ಇರುವ ಷರತ್ತು ಏನೆಂದರೆ ದೇವರು ತಿಳಿಸುವ ಸದ್ಯದ ಸಮಾಚಾರವನ್ನು ಶೇಖರಿಸುವುದು ಅಥವಾ ಸತ್ಯಾಂಶವನ್ನು ಈ ಕಾಲಕ್ಕೆ ತಕ್ಕಂತೆ ಪ್ರಸ್ತುತ ಪಡಿಸುವುದು. ಕುರುಡನು ಕುರುಡನನ್ನು ನಡೆಸಲು ಆಗದು (ಲೂಕ 6: 39) ದೇವರ ಸೂಕ್ಷ್ಮವಾದ ಪ್ರಕಟನೆಯನ್ನು ಮತ್ತು ಅಂತರಿಕ ದೃಷ್ಟಿಯನ್ನು ಹೊಂದದೆ ದೇವರು ಈಗ ಏನು ಮಾಡುತ್ತಿದ್ದಾನೆ ಎಂಬುದರ

ವಿಷಯದಲ್ಲಿ ನಾವು ಕುರುಡರಾಗಿದ್ದರೆ, ದೇವ ಜನರನ್ನು ಮುಂದಿನ ಹಂತಕ್ಕೆ ನಡೆಸಲು ಅಶಕ್ತರಾಗುತ್ತೇವೆ.

**ಕ್ರಿಸ್ತನ ದೇಹದಲ್ಲಿ ವಿಶ್ವಾಸಿಗಳ ಕರೆ, ಸ್ಥಾನ ಮತ್ತು ಅವರ ಕಾರ್ಯಭಾರಗಳ ವಿಷಯದಲ್ಲಿ ವಿಶ್ವಾಸಿಗಳಿಗೆ ತಿಳುವಳಿಕೆಯನ್ನು ಮೂಡಿಸಬೇಕು. ಪ್ರತಿ ವಿಶ್ವಾಸಿಯು ಸೇವಕನಾಗಿದ್ದಾನೆ ಎಂಬ ಪ್ರಕಟನೆಯನ್ನು ಕೊಡಬೇಕು**

ಎಲ್ಲಾ ಅಂಗಗಳಿಗೆ ಒಂದೇ ಕೆಲಸ ಇರುವುದಿಲ್ಲ ಆದರೆ ಪರಿಪೂರ್ಣವಾಗಿ ಅರ್ಥ ಮಾಡಿಕೊಳ್ಳುವ ಪ್ರಾಮುಖ್ಯವಾದ ಅಂಶವೇನೆಂದರೆ ಎಲ್ಲಾ ವಿಶ್ವಾಸಿಗಳಿಗೆ ಕ್ರಿಸ್ತನ ದೇಹದಲ್ಲಿ ಕೆಲವಾದರು ಕಾರ್ಯ ಭಾರಗಳಿವೆ ಎಂಬುದು (ರೋಮಾ 12: 4). ವಿಶ್ವಾಸಿಗಳು ಕ್ರಿಸ್ತನ ದೇಹದಲ್ಲಿ ತಮ್ಮ ಕಾರ್ಯಬಾರಗಳು ಯಾವುದು ಎಂಬುದನ್ನು ಕಂಡುಹಿಡಿಯುವುದಕ್ಕೂ ಮತ್ತು ಅವುಗಳನ್ನು ಪರಿಪೂರ್ಣಗೊಳಿಸುವುದಕ್ಕೂ ತರಬೇತಿ ಕೊಡಬೇಕು. ಐದು ಸೇವಾ ಕಾರ್ಯಗಳನ್ನು ನಡೆಸುವ ಸೇವಕರುಗಳಾದ ನಮ್ಮ ಜವಾಬ್ದಾರಿಕೆ ಏನೆಂದರೆ ಕ್ರಿಸ್ತನ ದೇಹದಲ್ಲಿ ಪ್ರತಿ ವಿಶ್ವಾಸಿಯ ಸೇವೆ ಏನು ಎಂಬುದನ್ನು ಕಂಡುಹಿಡಿಯಲು ಮತ್ತು ನೆರವೇರಿಸಲು ವಿಶ್ವಾಸಿಗಳನ್ನು ಉತ್ತೇಜನಪಡಿಸಬೇಕು.

**ವಿಶ್ವಾಸಿಗಳು ದೇವರ ಶಕ್ತಿಯನ್ನು ಪ್ರದರ್ಶಿಸುವಂತೆ, ತಂದೆಯ ಕಾರ್ಯಗಳನ್ನು ಮಾಡಲು ಶಕ್ತರಾಗುವಂತೆ ಮತ್ತು ಅಸಾಮಾನ್ಯವಾದ ಅದ್ಭುತಕಾರ್ಯಗಳನ್ನು ಮಾಡುವಂತೆ ಸಜ್ಜುಗೊಳಿಸಬೇಕು**

ಮಹತ್ಕಾರ್ಯಗಳನ್ನು, ಸ್ವಸ್ಥತಾ ಕಾರ್ಯಗಳನ್ನು, ಸೂಚಕಕಾರ್ಯಗಳನ್ನು ಮತ್ತು ಅದ್ಭುತ ಕಾರ್ಯಗಳಾದ ದೇವರ ಶಕ್ತಿ ಮತ್ತು ತಂದೆಯ ಕಾರ್ಯಗಳನ್ನು ಪ್ರತಿ ವಿಶ್ವಾಸಿಯು ಪ್ರದರ್ಶಿಸುವಂತೆ ಕರ್ತನಾದ ಯೇಸು ಉದ್ದೇಶಿಸುತ್ತಾನೆ. (ಯೋಹಾನ 14: 12 ಮಾರ್ಕ 16: 17–18)

ಮಹತ್ಕಾರ್ಯಗಳ, ಸೂಚಕಕಾರ್ಯಗಳ ಮತ್ತು ಅದ್ಭುತಕಾರ್ಯಗಳ ಪ್ರಾಮುಖ್ಯತೆಯನ್ನು ಈಗಿನ ಸಭೆಯು ಪಕ್ಕಕ್ಕೆ ಹಾಕಿ ಬುದ್ಧಿ ಶಕ್ತಿಯ ಮೇಲೆ, ಮಹತ್ತರವಾದ ಸಂಘ ಸಂಸ್ಥೆಗಳನ್ನು ಕಟ್ಟುವುದರ ಮೇಲೆ ಮತ್ತು ಇನ್ನು ಆನೇಕ ಅಂಶಗಳನ್ನೊಳಗೊಂಡಿರುವ ವಿಷಯಗಳ ಮೇಲೆ ಹೆಚ್ಚಿನ ಗಮನ ಕೊಡುತ್ತಾ ಇದೆ.

ಕ್ರಿಸ್ತನು ಮಾಡಿದ ಕಾರ್ಯಗಳನ್ನು ನಾವು ಮಾಡುವಂತೆ ಮತ್ತು ಇನ್ನು ಮಹತ್ತರ ಕಾರ್ಯಗಳನ್ನು ಮಾಡುವಂತೆ ಆತನು ಕೊಟ್ಟ ಆಜ್ಞೆಗೆ ನಾವು ಹಿಂತಿರುಗ ಬೇಕಾಗಿದೆ.

ತಂದೆಯ ಕಾರ್ಯಗಳಾದ ಮಹತ್ಕಾರ್ಯಗಳು, ಸೂಚಕಕಾರ್ಯಗಳು ಮತ್ತು ಅದ್ಭುತಕಾರ್ಯಗಳ ಪ್ರಾಮುಖ್ಯತೆಯ ವಿಷಯದಲ್ಲಿ ಅರ್ಥಮಾಡಿಕೊಳ್ಳಬೇಕು.

- ಹಳೇ ಒಡಂಬಡಿಕೆಯ ಪ್ರವಾದಿಗಳ ಸಾಕ್ಷಿಗಿಂತಲೂ ತಂದೆಯ ಕಾರ್ಯಗಳೇ ಮಹತ್ತರವಾದ ಸಾಕ್ಷಿ ಎಂದು ಕ್ರಿಸ್ತನು ಹೇಳಿದ್ದಾನೆ (ಯೋಹಾನ 5: 36)
- ಕ್ರಿಸ್ತನು ತಾನು ಮೆಸ್ಸಿಯನಾಗಿದ್ದಾನೆ ಎಂಬ ಸತ್ಯಾಂಶವನ್ನು ನಿರೂಪಿಸಿ, ತಾನು ಸಾರಿದ ಸಂದೇಶಕ್ಕಿಂತಲೂ ತಂದೆಯ ಕಾರ್ಯಗಳೇ ಹೆಚ್ಚಿನವುಗಳು ಎಂದು ಪ್ರಾಮುಖ್ಯತೆ ನೀಡಿದನು. ತಾನು ಮಹತ್ಕಾರ್ಯಗಳನ್ನು ಮಾಡಲಿಲ್ಲವಾದರೆ ತಾನು ಹೇಳುವ ಸಂದೇಶವನ್ನು ನಂಬಬೇಡಿರಿ ಎಂದು ಆತನು ಹೇಳಿದನು (ಯೋಹಾನ 10: 24, 25, 37, 38)
- ಫಿಲಿಪ್ಪನಿಗೆ ಯೇಸು ಹೇಳಿದ್ದೇನೆಂದರೆ ತಾನು ಮಾಡುವ ಕಾರ್ಯಗಳು ತಂದೆಯಿಂದ ಬಂದವನೆಂದು ನಿಜರೂಪದಲ್ಲಿ ನಿರೂಪಿಸುತ್ತದೆ ಎಂಬುದೆ (ಯೋಹಾನ 14: 8–11)
- ಸ್ನಾನಿಕನಾದ ಯೋಹಾನನು ಕ್ರಿಸ್ತನ ವಿಷಯದಲ್ಲಿ ಸಂಶಯಪಟ್ಟಾಗ ಕರ್ತನು ಅವನಿಗೆ ನೇರವಾಗಿ ಹೇಳಿದ್ದೇನೆಂದರೆ ತಾನು ಮಾಡುವ ಮಹತ್ಕಾರ್ಯಗಳೇ ಆತನು ನಿಜವಾಗಿಯು ಮೆಸ್ಸಿಯನೆಂದು ಪುರಾವೆ ನೀಡುತ್ತವೆ ಎಂಬುದೆ (ಮತ್ತಾಯ 11: 1–5).

ಐದು ಸೇವಾ ಕಾರ್ಯಗಳನ್ನು ನಡೆಸುವ ಸೇವಕರಾದ ನಾವು ಅಸಾಧಾರಣವಾದ ಅದ್ಭುತಾಕಾರ್ಯಗಳನ್ನು ಪ್ರದರ್ಶಿಸುವಂತೆ ಮುನ್ನುಗ್ಗಬೇಕು. ಅಷ್ಟೇ ಅಲ್ಲದೆ ಪ್ರತಿ ವಿಶ್ವಾಸಿಗಳು ಮಹತ್ಕಾರ್ಯಗಳನ್ನು ಮತ್ತು ಅದ್ಭುತಕಾರ್ಯಗಳನ್ನು ಮಾಡುವಂತೆ ಸಜ್ಜುಗೊಳಿಸಬೇಕು.

**ಸಭೆಗಳು ಶಿಶುವಿಹಾರ ಕೇಂದ್ರಗಳ ಸ್ಥಿತಿಯಿಂದ ತರಬೇತಿ ಕೇಂದ್ರಗಳಾಗುವಂತೆ ರೂಪಾಂತರಗೊಳಿಸಬೇಕು**

ಈಗಿನ ಅನೇಕ ಸಭೆಗಳು ಭಾನುವಾರ ಬಂದರೆ ಶಿಶುವಿಹಾರ ಕೇಂದ್ರಗಳಾಗಿ ಮಾರ್ಪಟ್ಟಿವೆ ಹೇಗೆಂದರೆ ವಿಶ್ವಾಸಿಗಳನ್ನು ಆತ್ಮದಲ್ಲಿ ಅಭಿವೃದ್ಧಿಗೊಳಿಸದೆ ಮತ್ತು

ಕ್ರಿಸ್ತನ ಶಕ್ತಿಯುತ ಸೈನಿಕರನ್ನಾಗಿ ತರಬೇತಿಗೊಳಿಸದೆ ಇದೆ. ಲೋಕದಲ್ಲಿ ದೇವರು ಅನುಗ್ರಹಿಸಿರುವ ಸೇವೆಯನ್ನು ಮಾಡುವಂತೆ ನಮ್ಮ ಸ್ಥಳೀಯ ಸಭೆಗಳು ರೂಪಾಂತರಗೊಳ್ಳಬೇಕಾಗಿದೆ.

ವಿಶ್ವಾಸಿಗಳನ್ನು ಸಜ್ಜುಗೊಳಿಸಲು ಪ್ರತಿ ಸ್ಥಳೀಯ ಸಭೆಗಳಿಗೆ ವ್ಯವಸ್ಥೆ, ವಿಧಾನ ಮತ್ತು ಕ್ರಮವಾದ ಕಟ್ಟು ಪಾಡುಗಳು ಅಗತ್ಯವಿದೆ.

**ವಿಶ್ವಾಸಿಗಳನ್ನು ಪವಿತ್ರಾತ್ಮನ ನೂತನ ಹಂತಗಳಿಗೆ ನಡೆಸಬೇಕು**

ಕ್ರಿಸ್ತನು ಭೂಮಿಯ ಮೇಲೆ ಇದ್ದಾಗ ಆತನಿಗೆ ಆತ್ಮನು ಅಳತೆಯಿಲ್ಲದೆ ಕೊಡಲ್ಪಟ್ಟಿದ್ದನು (ಯೋಹಾನ 3: 34).

ನಾವು ಇಲ್ಲಿಯವರೆಗೂ ಏನನ್ನು ಅನುಭವಿಸಿದ್ದೆವೋ ಅದಕ್ಕಿಂತ ಮಿಗಿಲಾಗಿ ಆತ್ಮನ ಮಹತ್ತರವಾದ ಮತ್ತು ಅಳತೆಯುಳ್ಳ ವರಗಳುಂಟು.

ನಾವು ಈಗ ಎಲ್ಲಿದ್ದೆವೋ ಅದನ್ನು ಬಿಟ್ಟು ಆತ್ಮನಲ್ಲಿ ಮುನ್ನುಗ್ಗಿ ಮತ್ತು ಆತ್ಮನ ವಿಷಯಗಳಲ್ಲಿ ಆಳವಾಗಿ ಹೋಗುವಂತದ್ದು ಅಗತ್ಯ. ದೇವರ ರಾಜ್ಯವು ಭೂಮಿಯ ಮೇಲೆ ಸ್ಥಾಪನೆಯಾಗುವಂತದ್ದು ಆತ್ಮನ ಶಕ್ತಿಯಿಂದಲೆ (ಜೆಕಾರ್ಯ 4: 6 ಮತ್ತಾಯ 12: 28)

ವಿಶ್ವಾಸಿಗಳು ಮಾರುಕಟ್ಟೆಗಳಲ್ಲಿ ಮತ್ತು ಲೋಕದ ನಾನಾ ಕಡೆಗಳಲ್ಲಿ ತಮ್ಮ ಕರೆಯನ್ನು ಪರಿಪೂರ್ಣಗೊಳಿಸುವಂತೆ ಐದು ಸೇವಾ ಕಾರ್ಯಗಳನ್ನು ನಡೆಸುವ ಸೇವಕರಾದ ನಾವು ಆತ್ಮನ ವಿಧವಿಧವಾದ ಹಂತಗಳನ್ನು ಮತ್ತು ಅಭಿಷೇಕವನ್ನು ಹೊಂದುವ ಅಗತ್ಯತೆಯನ್ನು ವಿಶ್ವಾಸಿಗಳಿಗೆ ತೋರಿಸಿ ಕೊಡಬೇಕು. (ಯೆಶಾಯ 11: 1–2)

**ರಚನಾ–ಕ್ರಮ ಮತ್ತು ಶಾಸನ ಪದ್ಧತಿಯನ್ನು ಒದಗಿಸುವುದು**

ವಿಶ್ವಾಸಿಗಳ ಚಳುವಳಿಯಲ್ಲಿ ಐದು ಸೇವಾ ಕಾರ್ಯದ ಸೇವೆಯು ನಿಜವಾಗಿ ಯಾವುದು ಪ್ರಾಮುಖ್ಯವಾಗಿದೆಯೋ ಅದನ್ನು ಮಾಡುವುದಕೋಸ್ಕರ ಬಿಡುಗಡೆಗೊಳ್ಳುತ್ತದೆ. ಅಂದರೆ ವಿಶ್ವಾಸಿಗಳನ್ನು ಸೇವೆಗೋಸ್ಕರ ಸಜ್ಜುಗೊಳಿಸುವಂತದ್ದು. ಉತ್ತಮವಾದ ಮತ್ತು ಉತ್ಕೃಷ್ಟವಾದ ಕಾರ್ಯವನ್ನು ನಿರ್ವಹಿಸಲು ಇದು ಮುಂದುವರಿಯಲೇ ಬೇಕು. ಐದು ಸೇವಾ ಕಾರ್ಯಗಳನ್ನು ನಿರ್ವಹಿಸುವುದಕ್ಕೆ ಬಹಳ ಜನರ ಅಗತ್ಯವಿದೆ. ಅಪೋಸ್ತಲರ ನಾಯಕತ್ವ ಮತ್ತು

ಪ್ರವಾದಿಗಳ ಹೊರದೃಷ್ಟಿ ಮತ್ತು ಒಳದೃಷ್ಟಿಯಿಂದ ಮಾರ್ಗದರ್ಶನ, ಸಭಾಪಾಲಕರ ಚಿಂತನೆ ಮತ್ತು ತಿದ್ದುಪಾಟು, ಬೋದಕರ ದೃಡಪಡಿಸುವಿಕೆ, ಮತ್ತು ಸುವಾರ್ತಿಕರ ಕೂಡಿಸುವಿಕೆ ಹಾಗೂ ಪ್ರೋತ್ಸಾಹಿಸುವುದು. ಇವುಗಳು ಬಹಳ ಅವಶ್ಯಕವಾಗಿವೆ.

**ಅಪೋಸ್ತಲರು**

ತಾವು ಕರೆಯಲ್ಪಟ್ಟ ಕಾರ್ಯಗಳನ್ನು ನಡೆಸುವುದಕ್ಕಾಗಿ ಅಪೋಸ್ತಲರು ಪರಲೋಕದಿಂದ ಒಂದು ಸ್ಪಷ್ಟವಾದ ಚಿತ್ರಣವನ್ನು ಹೊಂದಿಕೊಳ್ಳಬೇಕು. ಇವರ ಕಾರ್ಯಗಳು ಅಸ್ತಿವಾರ ಹಾಕುವುದರಲ್ಲಿ, ಚೌಕಟ್ಟನ್ನು ಸ್ಥಾಪಿಸುವುದರಲ್ಲಿ ಮತ್ತು ಪರಲೋಕ ದೃಷ್ಠಿಗನುಸಾರವಾದ ರಚನಾ–ಕ್ರಮಗಳನ್ನು ಸೃಷ್ಠಿಸುವುದರಲ್ಲಿ ಒಳಗೊಂಡಿರುತ್ತದೆ. ಯಾವುದೆ ನಿರ್ದಿಷ್ಟವಾದ ಸೇವೆಗೆ ಅಪೋಸ್ತಲರು ದೇವರು ಕೊಟ್ಟ ಚಿತ್ರಣವನ್ನು ಮುಂದಿಡಬೇಕು. ಯೋಜನೆಗಳನ್ನು ಸಾಧಿಸಲು ಇರುವ ಕೌಶಲ್ಯತೆಗಳನ್ನು ಅಥವಾ ತಂತ್ರಗಳನ್ನು ಅಪೋಸ್ತಲರು ಸಮಾಜದ ಸೇವೆಯ ನಾನಾ ಸ್ಥಳಗಳಲ್ಲಿ ಬಿಡುಗಡೆಗೊಳಿಸಬೇಕು. ಸುವಾರ್ತೆಯನ್ನು ಹಬ್ಬಿಸಿ ತಾವು ಇರುವ ನಗರಗಳನ್ನು ಮತ್ತು ಪ್ರಾಂತ್ಯಗಳನ್ನು ಬದಲಾವಣೆಗೊಳಿಸುವುದಕ್ಕೋಸ್ಕರ ಅಪೋಸ್ತಲರಲ್ಲಿ ಸ್ಪಷ್ಟವಾದ ಚಿತ್ರಣ ಮತ್ತು ದೇವರ ಮಾರ್ಗದರ್ಶನ ಇರುತ್ತದೆ.

**ಪ್ರವಾದಿಗಳು**

ನಿರ್ಜೀವವಾದ ದರ್ಶನವನ್ನು ಪುನರುತ್ತಾನಗೊಳಿಸಲು ದೇವರಿಂದ ವರ್ತಮಾನಕಾಲದ ವಾಕ್ಯವನ್ನು ತರಲು, ಅಪೋಸ್ತಲರಿಂದ ಬಿಡುಗಡೆಗೊಂಡ ತಂತ್ರೋಪಾಯಗಳಿಗೆ ಮತ್ತು ದರ್ಶನಗಳಿಗೆ ಕಾರ್ಯಗತ ಮಾಡಲು ಬೇಕಾದ ಸಾಮರ್ಥ್ಯವನ್ನು ಒದಗಿಸಲು ಪ್ರವಾದಿಗಳು ಎದ್ದು ಬರುವರು (ಎಜ್ರನು 4: 24, 5:1–2)

**ಬೋದಕರು**

ವಿಶ್ವಾಸಿಗಳನ್ನು ಸಜ್ಜುಗೊಳಿಸಲು, ಪರಿಪಕ್ವತೆಗೆ ನಡೆಸಲು ಮತ್ತು ವಾಕ್ಯದಲ್ಲಿ ಬೇರೂರಿ, ಅಭಿವೃದ್ಧಿ ಪಡಿಸಲು ನಮಗೆ ಸಾಮರ್ಥ್ಯವುಳ್ಳ ಮತ್ತು ಅಭಿಷೇಕಿಸಲ್ಪಟ್ಟ ಬೋದಕರ ಸೇವೆಯು ಅತ್ಯಗತ್ಯವಾಗಿದೆ.

**ಸಭಾಪಾಲಕರು**

ದೇವರ ಹೃದಯಕ್ಕನುಸಾರವಾದ ಪಾಲಕರನ್ನು ನೋಡಲಿದ್ದೇವೆ (ಯರೆ: 3: 15). ಅಂದರೆ ಈ ಪಾಲಕರು ದೇವರ ಮನೆಯಲ್ಲಿರುವ ವಿಶ್ವಾಸಿಗಳನ್ನು ಪೋಷಿಸಿ ಸ್ಥಿರಪಡಿಸುತ್ತಾರೆ. ಈ ಪಾಲಕರು ದೇವರ ಕುಟುಂಬಕ್ಕಾಗಿ ದಾಹವುಳ್ಳವರು ಮತ್ತು ತಂದೆಯ ಹೃದಯವುಳ್ಳವರು ಆಗಿರುತ್ತಾರೆ.

**ಸುವಾರ್ತಿಕರು**

ಮಹತ್ತರವಾದ ಬೆಳೆಯನ್ನು ಕೊಯ್ಯಲು ಮತ್ತು ವಿಶ್ವಾಸಿಗಳನ್ನು ಸಜ್ಜುಗೊಳಿಸಲು ಅಭಿಷೇಕಿಸಲ್ಪಟ್ಟ ಸುವಾರ್ತಿಕರು ಎದ್ದು ಬರುವರು.

ಸ್ಥಳೀಯ ಸಭೆಗಳು ತಾವು ನೇಮಿಸಲ್ಪಟ್ಟ ಕ್ಷೇತ್ರಗಳಲ್ಲಿ ದೇವರ ಮನೆಯಾಗಿರಲು ಮುಂದುವರಿಯುತ್ತವೆ (1 ತಿಮೋಥಿ 3: 15). ಅಂದರೆ ಪ್ರತಿ ವಿಶ್ವಾಸಿಯು ನಂಬಿಗಸ್ತನಾಗಿ ಮತ್ತು ಜವಾಬ್ದಾರಿಯುತ ಸದಸ್ಯನಾಗಿ ಕ್ರಿಸ್ತನ ದೇಹದ ಅತ್ಯಂತ ಪ್ರಾಮುಖ್ಯವಾದ ಅಂಗವಾಗಿ ಅವರ ಕಾರ್ಯಗಳನ್ನು ನೆರವೇರಿಸಬೇಕು. ದಶಮಾಂಶ ಮತ್ತು ಕಾಣಿಕೆಗಳನ್ನು ಸ್ಥಳೀಯ ಸಭೆಯಲ್ಲಿ ಕೊಡುವುದನ್ನು ಮುಂದುವರಿಸಬೇಕು. ದೇವರು ತನ್ನ ಜನರ ಮದ್ಯದಲ್ಲಿ ಇನ್ನೂ ಕ್ರಮವಾಗಿದ್ದಾನೆ. (1 ಕೊರಿಂಥ 14: 33, 40). ವಿಶ್ವಾಸಿಗಳು ಕ್ರಮವಿಲ್ಲದೆ ಅಥವಾ ತಮ್ಮ ಮನಸ್ಸಿಗೆ ತೋಚಿದ ಹಾಗೆ ನಡೆಯದೆ ಅಥವಾ ತಮ್ಮ ದರ್ಶನಗಳು ಮತ್ತು ಕನಸುಗಳನುಸಾರವಾಗಿ ನಡೆಯದೆ ಇರಬೇಕು (ನ್ಯಾಯಸ್ಥಾಪಕರು 17: 6, 21: 25)

ಯೋವೇಲನ ಸೇನೆಯ ಶೂರರಂತೆ ವಿಶ್ವಾಸಿಗಳು ಓಡಾಡುತ್ತಾರೆ. ಯೋದರ ಹಾಗೆ ಗೋಡೆಯೇರುತ್ತಾರೆ ಮತ್ತು ತಮ್ಮ ಸಾಲುಗಳಲ್ಲಿಯೇ ನಡೆಯುತ್ತಾರೆ. ಆ ಸಾಲುಗಳನ್ನು ಕಲಸುವುದಿಲ್ಲ, ಒಂದಕ್ಕೊಂದು ನೂಕಾಡುವುದಿಲ್ಲ ಆ ಸಾಲುಗಳು ಒಡೆದು ಹೋಗುವುದಿಲ್ಲ (ಯೋವೇಲ 2: 7, 8)

## ಅವಶ್ಯಕವಾದ ಕ್ರಮ ಜೋಡಣೆ ಮಾಡುವಂತದ್ದು

ವಿಶ್ವಾಸಿಗಳ ಚಳುವಳಿಯ ಪೂರ್ವ ಸಿದ್ದತೆಗಾಗಿ ಐದು ಸೇವಾ ಕಾರ್ಯಗಳ ಸೇವೆಯು ಅಗತ್ಯವಾದ ಕ್ರಮ ಜೋಡಣೆಯನ್ನು ಮಾಡಬೇಕು.

## ಕ್ರಿಸ್ತನ ದೇಹದಲ್ಲಿ ವಿಶ್ವಾಸಿಗಳು ಸ್ಥಾನ ಮತ್ತು ಕಾರ್ಯರೂಪಣೆಯಲ್ಲಿ ಬದಲಾವಣೆಯನ್ನು ಉಂಟುಮಾಡುವುದು

ಕೇವಲ ಐದು ಸೇವಾ ಕಾರ್ಯಗಳನ್ನು ನಡೆಸುವ ಸೇವಕರೆ ಕಾರ್ಯ ನಿರ್ವಹಿಸಲು ಸಾಧ್ಯ ಎಂಬುವ ಅಲೋಚನೆಯನ್ನು ಬಿಟ್ಟು ಪ್ರತಿ ವಿಶ್ವಾಸಿಯು ಸೇವಕನಾಗಿದ್ದಾನೆ ಎಂಬ ಸತ್ಯಾಂಶವನ್ನು ಗ್ರಹಿಸಬೇಕು.

## ವಿಶ್ವಾಸಿಗಳೊಂದಿಗೆ ನಮ್ಮ ಮನೋಭಾವನೆಗಳ ಹೊಂದಾಣಿಕೆ

ಆತ್ಮ ವಿಶ್ವಾಸವಿಲ್ಲದಿರುವ ಭಾವನೆಗಳನ್ನು, ಕೀಳಿರಿಮೆ ಇರುವ ಸ್ವಭಾವಗಳನ್ನು, ಬೇರೆಯವರನ್ನು ಹತೋಟಿಯಲ್ಲಿಡುವ ಹಂಬಲವನ್ನು ಮತ್ತು ದೇವ ಜನರ ಮೇಲೆ ದಬ್ಬಾಳಿಕೆ ನಡೆಸುವ ಸ್ವಭಾವಗಳನ್ನು ನಮ್ಮಿಂದ ತೆಗೆದು ಹಾಕಬೇಕು. ನಾವು ಮಾದರಿವುಳ್ಳವರಾಗಿ ನಡೆದು ಶಕ್ತಿಯುತ ನಾಯಕರುಗಳಾಗಿ ಏದ್ದೇಳಬೇಕು.

## ವಿಶ್ವಾಸಿಗಳು ನಮ್ಮ ಜೊತೆಯಲ್ಲಿ ಸೇವೆಸಲ್ಲಿಸುವುದಕ್ಕೆ ಅವಕಾಶಗಳನ್ನು ಕಲ್ಪಿಸುವುದು

ವಿಶ್ವಾಸಿಗಳು ನಮ್ಮ ಜೊತೆ ಸೇರಿ ಮತ್ತು ನಮ್ಮ ಜೊತೆಯಲ್ಲಿ ಸೇವೆ ಸಲ್ಲಿಸುವಂತೆ ಅನುವು ಮಾಡಿಕೊಡಬೇಕು. ಯಾವ ರೀತಿಯಾಗಿ ಪೌಲನು ಯೌವನಸ್ಥನಾದ ತಿಮೋಥಿಯನ್ನು ತನ್ನ ಜೊತೆಯಲ್ಲಿ ಸೇರಿಸಿ ಸುವಾರ್ತಾ ಸೇವೆಯಲ್ಲಿ ಭಾಗಿಯಾಗುವಂತೆ ಅನುವು ಮಾಡಿದನೋ ಹಾಗೆಯೇ ನಾವು ಕೂಡ ವಿಶ್ವಾಸಿಗಳಿಗೆ ಅವಕಾಶಗಳನ್ನು ಕಲ್ಪಿಸಬೇಕು (ಫಿಲಿಪ್ಪಿ 2: 19–22).

## ಸ್ಥಳೀಯ ಸಭೆಗಳಲ್ಲಿ ಸೇವಾ ತಂಡವನ್ನು ಸ್ಥಾಪಿಸುವುದು

ಒಬ್ಬನೇ ಎಲ್ಲವನ್ನು ನಿರ್ವಹಿಸುವ ನಾಯಕತ್ವದ ಶೈಲಿಯಿಂದ ಮುನ್ನುಗ್ಗಿ ಸೇವೆಯನ್ನು ಮಾಡುವ ಒಂದು ತಂಡವನ್ನು ನಮ್ಮ ಸ್ಥಳೀಯ ಸಭೆಗಳಲ್ಲಿ ಸ್ಥಾಪಿಸುವ ಅಗತ್ಯವಿದೆ. ಈ ಸೇವಾ ತಂಡಗಳು ಪೂರ್ಣ ಸಮಯ ಸೇವೆ ಮಾಡುವ ಐದು ಸೇವಾ ಕಾರ್ಯಗಳನ್ನು ನಡೆಸುವ ಸೇವಕರುಗಳನ್ನು ಒಳಗೊಂಡಿರಬಹುದು. ಮತ್ತು ಐದು ಸೇವಾ ಕಾರ್ಯಗಳನ್ನು ನಡೆಸುವ ಸೇವಕರು ತಮ್ಮ ಪ್ರಾಮುಖ್ಯವಾದ ಕರ್ತವ್ಯವನ್ನು ಮಾರುಕಟ್ಟೆಯ ಸ್ಥಳಗಳಲ್ಲಿ ಮಾಡುವಂತವರಾಗಿರುವುದನ್ನು ಒಳಗೊಂಡಿದೆ.

**ಪೂರ್ಣ ಜ್ಞಾನ ಮತ್ತು ವಿವೇಚನೆಯುಳ್ಳವರಾಗಿ ಮಾರ್ಗ ದರ್ಶನ ತೋರಿಸುವಂತದ್ದು ಮುಂಜಾಗರುಕತೆ ವಹಿಸುವಂತದ್ದು ಮತ್ತು ಅಧಿಕಾರ ನಿರ್ವಹಿಸುವಂತದ್ದು**

ವಿಶ್ವಾಸಿಗಳನ್ನು ಸೇವೆಯಲ್ಲಿ ತರಬೇತಿಗೊಳಿಸಿ ಬಿಡುಗಡೆಗೊಳಿಸುವುದರ ವಿಷಯವಾಗಿ ನಾವು ಪ್ರೋತ್ಸಾಹಿಸುವಾಗ, ದೇವರಿಂದ ನೇಮಿಸಲ್ಪಟ್ಟ ನಾಯಕರುಗಳಾದ ನಾವು ನಮಗಿರುವ ಜವಾಬ್ದಾರಿಗಳನ್ನು ತ್ಯಜಿಸಬಾರದು. ನಮ್ಮ ಜವಾಬ್ದಾರಿ ಏನೆಂದರೆ ವಿಶ್ವಾಸಿಗಳನ್ನು ಸರಿಯಾದ ಮಾರ್ಗದರ್ಶನದಲ್ಲಿ ನಡೆಸುವಂತದ್ದು, ಎಚ್ಚರಿಕೆ ವಹಿಸುವಂತದ್ದು ಮತ್ತು ಜ್ಞಾನ ವಿವೇಚನೆಯುಳ್ಳವರಾಗಿ ಸರಿಯಾದ ಆಳ್ವಿಕೆ ನಡೆಸುವಂತದ್ದು ವಿಶ್ವಾಸಿಗಳು ಸೇವೆಸಲ್ಲಿಸುವುದನ್ನು ಕಲಿತುಕೊಳ್ಳುವಾಗ ಅವರ ಜೀವಿತದಲ್ಲಿ ಪರಿಪಕ್ವತೆ ಮತ್ತು ಅಭಿವೃದ್ಧಿ ಕಾಣುವಂತೆ ನಡೆಸಬೇಕು.

**ಸೇವೆಯಲ್ಲಿ ನೂತನ ಮಾರ್ಗಗಳಿಗೆ ಹೊಂದಿಕೊಳ್ಳಬೇಕು**

ಸೇವೆಯಲ್ಲಿ ಬೇರೆ ಬೇರೆ ವಿಧಗಳುಂಟು ಮತ್ತು ಕಾರ್ಯಗಳಲ್ಲಿ ಬೇರೆ ಬೇರೆ ವಿಧಗಳುಂಟು ಈ ರೀತಿಯಾಗಿ ದೇವರು ತನ್ನದೇ ರೀತಿಯಲ್ಲಿ ನಡೆಸುವ ತನ್ನ ಕಾರ್ಯಗಳನ್ನು ನಾವು ಸೀಮಿತಗೊಳಿಸಲಾಗುವುದಿಲ್ಲ. (1 ಕೊರಿಂಥ 12: 5–6) ದೇವರು ತನ್ನ ವಿಶ್ವಾಸಿಗಳ ಮೂಲಕ ಹೊಸ ಹೊಸ ರೀತಿಯಲ್ಲಿ ಅಂದರೆ ನೂತನವಾದಂತ ಆಲೋಚನೆಯುಳ್ಳ ಪ್ರೇರಣೆಗಳನ್ನು ಕೊಡುವುದರ ಮೂಲಕ ನಶಿಸಿಹೋಗುವ ಆತ್ಮಗಳನ್ನು ರಕ್ಷಿಸುವ ನೂತನ ಮಾರ್ಗಗಳನ್ನು ತೋರಿಸಿಕೊಡುವನು. ನಾವು ರೂಢಿಮಾಡಿಕೊಂಡಿರುವ ಸೇವೆಗಿಂತ ಇದು ಬಹಳ ವ್ಯತ್ಯಾಸವಾಗಿ ಕಂಡುಬರಬಹುದು. ದೇವರು ತನ್ನ ವಿಶ್ವಾಸಿಗಳ ಮೂಲಕ ಏನನ್ನು ಸಾಧಿಸಬೇಕೆಂದು ಅಂದುಕೊಂಡಿದ್ದಾನೋ, ಅವುಗಳಿಗೆ ನಾವು ಅಡ್ಡಿಯಾಗಿರುವುದನ್ನು ಬಿಟ್ಟು ಸ್ವಾಗತಮಾಡಬೇಕು.

# 4

# ಬದಲಾವಣೆಯನ್ನು ಉಂಟುಮಾಡುವುದು

ವಿಶ್ವಾಸಿಗಳು ಪೂರ್ಣ ತರಬೇತಿ ಹೊಂದಿ ಸೇವಾ ಕಾರ್ಯಗಳನ್ನು ಮಾಡುವ ದೇವರ ಈ ಹೊಸ ತಿರುವು ಅಂದರೆ ವಿಶ್ವಾಸಿಗಳ ಚಳುವಳಿ ನಮ್ಮ ಮೇಲೆ ಇರುವ ಜವಾಬ್ದಾರಿಯಾಗಿದೆ. ಐದು ಸೇವಾ ಕಾರ್ಯಗಳನ್ನು ನಡೆಸುವ ಸೇವಕರಾದ ನಾವು ದೇವರ ಈ ಹೊಸ ತಿರುವಿಗೆ ಪರಿವರ್ತನೆಯನ್ನು ಉಂಟು ಮಾಡಬೇಕಾಗಿದೆ. ದೇವರ ಸಂಕಲ್ಪಗಳನ್ನು ನೇರವೇರಿಸಲು ಮತ್ತು ಆತನು ಈಗ ಭೂಮಿಯ ಮೇಲೆ ನಡೆಸುವ ತನ್ನ ಹೊಸ ಕಾರ್ಯವನ್ನು ಪೂರ್ಣಗೊಳಿಸಲು ಅಡ್ಡಿಯಾಗಿರುವ ನಮ್ಮ ಸಂಪ್ರದಾಯ ಮತ್ತು ಅಭದ್ರತೆಗಳನ್ನು ನಿಲ್ಲಿಸಬೇಕು. ಮೇಘಸ್ತಂಭವಾಗಿಯೂ ಮತ್ತು  ಅಗ್ನಿಸ್ತಂಭವಾಗಿಯೂ ದೇವರ ಪ್ರಸನ್ನತೆಯು ಮುನ್ನುಗ್ಗುತ್ತಿರುವ ಕಾರಣ ಐದು ಸೇವಾ ಕಾರ್ಯಗಳನ್ನು ನಡೆಸುವ ಸೇವಕರಾದ ನಾವು ಪರಿವರ್ತನೆಯನ್ನುಂಟುಮಾಡಲು ವಿಫಲರಾದರೆ ಹಿಂದುಳಿಯುತ್ತೇವೆ.

## ಕುಂಟು ಸಂಪ್ರದಾಯಗಳನ್ನು ತೊಡೆದು ಹಾಕುವುದು

ದೇವರ ಆಜ್ಞೆಯನ್ನು ಮೀರಿ ಮತ್ತು ಮನುಷ್ಯರ ಸಂಪ್ರದಾಯಗಳನ್ನು ಪಾಲಿಸುವ ಪರಿಸಾಯರಿಗೂ ಮತ್ತು ಸದ್ದುಕಾಯರಿಗೂ ಯೇಸು ಕಠಿಣವಾಗಿ ಮಾತನಾಡಿದ್ದಾನೆ (ಮತ್ತಾಯ 15: 1–9) ನಿಜರೂಪದಲ್ಲಿ ಇವರು ಮನುಷ್ಯರು ಕಲ್ಪಿಸಿದ ಸಂಪ್ರದಾಯಗಳನ್ನೇ ಬೋಧಿಸುತ್ತಿದ್ದರು.

ನಮಗೆ ಕುಂಠಿತ ಮಾಡಿರುವ ಸಂಪ್ರದಾಯಗಳಿಂದ ವಿಮುಕ್ತಿಗೊಳ್ಳೋಣ

- ನಮ್ಮಲ್ಲಿ ಕೆಲವರು, ನಮ್ಮ ದಾರ್ಮಿಕ ಸಂಪ್ರಾದಾಯಗಳಿಂದ ಈಗಿನ ಅಪೋಸ್ತಲರಿಗೆ ಮತ್ತು ಪ್ರವಾದಿಗಳಿಗೆ ಸ್ಥಳ ಇಲ್ಲದಂತೆ ಮಾಡಿದ್ದೇವೆ. (ಸುವಾರ್ತಿಕರನ್ನು, ಸಭಾಪಾಲಕರನ್ನು ಮತ್ತು ಬೋದಕರನ್ನು ಮಾತ್ರ ಸ್ವೀಕರಿಸುತ್ತೇವೆ) ದೇವರು

ಅಪೋಸ್ತಲರ ಮತ್ತು ಪ್ರವಾದಿಗಳ ಸೇವೆಯನ್ನು ಪುನರ್‌ಸ್ಥಾಪಿಸಿದ್ದಾನೆಂದು ಅರ್ಥಮಾಡಿಕೊಳ್ಳಬೇಕು, ವಿಶ್ವಾಸಿಗಳನ್ನು ಸಜ್ಜುಗೊಳಿಸುವುದಕ್ಕೆ ಇವರುಗಳು ಅತ್ಯಗತ್ಯ.

- ನಮ್ಮಲ್ಲಿ ಇನ್ನೂ ಕೆಲವರು ಹಳೆಯ ಧಾರ್ಮಿಕ ಮತ್ತು ಜನಸಾಮನ್ಯರ ರೀತಿಯ ಮನೋಭಾವನೆವುಳ್ಳವರಾಗಿದ್ದಾರೆ. ಪ್ರತಿ ವಿಶ್ವಾಸಿಯು ಸೇವಕನಾಗಿದ್ದಾನೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

- ಆತ್ಮೀಕತೆ ಮತ್ತು ಪ್ರಾಪಂಚಿಕತೆಯಲ್ಲಿರುವ ಪ್ರತ್ಯೇಕತೆಯಲ್ಲಿಯೇ ನಮ್ಮಲ್ಲಿ ಕೆಲವರು ಉಳಿದಿದ್ದಾರೆ. ದೇವರು ನೇಮಿಸಿರುವ ಯಾವುದೇ ಕಾರ್ಯವಾಗಲಿ ಸೇವೆಯಾಗಿದೆ. ಆ ಸೇವೆಯು ಸಭೆಯ ಒಳಗಡೆ ಅಥವಾ ಲೋಕದ ನಾನಾ ಕಡೆಯಲ್ಲಿರುವ ಕಾರ್ಯಾಲಯಗಳಲ್ಲಾಗಲಿ, ವಿದ್ಯಾ ಸಂಸ್ಥೆಗಳಲ್ಲಾಗಲಿ ಕ್ರೀಡಾ ಸ್ಥಳಗಳಲ್ಲಾಗಲಿ ಮತ್ತು ಇತರೆ ಭಾಗಗಳಲ್ಲಾಗಲಿ ನಡೆಯಬಹುದು.

- ನಮ್ಮಲ್ಲಿ ಇನ್ನು ಕೆಲವರು ಸಭೆಯ ಮತ್ತು ಸೇವೆಯ ರಚನಾ ಕ್ರಮ ಮತ್ತು ನಿಯಮಾವಳಿಯನ್ನು ಬದಲಾಯಿಸಲು ಸಮ್ಮತಿಸುತ್ತಾ ಇಲ್ಲ. ಹೊಸ ದ್ರಾಕ್ಷ ರಸವು ಹೊಸ ಬುದ್ದಲಿಗಳಲ್ಲಿ ಹಾಕಲ್ಪಡಬೇಕು. (ಮತ್ತಾಯ 9: 17) ಈಗಿನ ಆತ್ಮನ ಸುರಿಸುವಿಕೆಗೆ ನೂತನವಾದಂತ ಸಭೆಯ ರಚನಾಕ್ರಮಗಳು ಮತ್ತು ನೂತನವಾದಂತ ಶಾಸನ ಪದ್ದತಿಗಳು ಅಗತ್ಯವಿದೆ. ನಮ್ಮ ಸಭೆಯ ಮತ್ತು ಸೇವೆಯ ಐದು ಸೇವಾ ಕಾರ್ಯಗಳನ್ನು ನಡೆಸುವ ಅಪೋಸ್ತಲರಿಗೆ, ಪ್ರವಾದಿಗಳಿಗೆ, ಸಭಾ ಪಾಲಕರಿಗೆ ಬೋಧಕರಿಗೆ ಮತ್ತು ಸುವಾರ್ತಿಕರಿಗೆ ಸರಿಯಾದ ರಚನಾ–ಕ್ರಮ ಮಾಡುವುದಕ್ಕೆ ಸ್ಥಳಮಾಡಿಕೊಡಬೇಕು. ನಮ್ಮದೇ ಆದ ಸಭೆಯ ರಚನಾ–ಕ್ರಮಗಳನ್ನು ಮಾಡಿ ಕ್ರಿಸ್ತನು ಸಭೆಯಲ್ಲಿ ನೇಮಿಸಿರುವ ಸೇವಾ ಕಾರ್ಯಗಳನ್ನು ತೊಡೆದು ಹಾಕಿದ್ದೇವೆ. ಇದರಿಂದ ಸೇವಾ ಕಾರ್ಯಗಳಿಗೆ ವಿಶ್ವಾಸಿಗಳನ್ನು ಸಜ್ಜುಗೊಳಿಸಲು ಖಚಿತವಾಗಿ ಯಾವುದೇ ಮಾರ್ಗ ಇಲ್ಲದಂತಾಗಿದೆ. ಒಂದು ವೇಳೆ ಈ ರೀತಿಯ ರಚನಾ–ಕ್ರಮಗಳನ್ನು ಮತ್ತು ನಿಯಮಾವಳಿಗಳನ್ನು ನಾವು ನಮ್ಮ ಸಭೆಗಳಲ್ಲಿ ಬದಲಾಯಿಸದೆ ಹೋದರೆ ಆತ್ಮನಿಲ್ಲದ ಕೇವಲ ಬುದ್ದಲಿಗಳಾಗಿ ಕಂಡುಬರುತ್ತೇವೆ.

➢ ನಮ್ಮಲ್ಲಿ ಕೆಲವರು ನಮ್ಮದೇ ಆದಂತ ಕೆಲವು ದಾರಿಗಳಲ್ಲಿ ಮತ್ತು ಕ್ರಮಾನುಸರಣೆಗಳಲ್ಲಿ ಅಂಟಿಕೊಂಡಿದ್ದೇವೆ. ಪ್ರಾಮಾಣಿಕವಾಗಿರುವ ವ್ಯವಸ್ಥಿತ ಮತ್ತು ವಾಸ್ತವಿಕವಾಗಿ ದೇವರಿಂದ ಕೊಡಲ್ಪಟ್ಟಿರುವ ಕ್ರಮವಿಧಿಗಳನ್ನು ಉಪಯೋಗಿಸುತ್ತೇವೆ ಆದರೆ ಇದು ಒಂದು ಸೂಕ್ತ ಕಾಲಕ್ಕೆ ಮಾತ್ರ ಇರುತ್ತದೆ. ದೇವರು ಈಗ ನಡೆಸುತ್ತಿರುವ ಕಾರ್ಯಗಳಲ್ಲಿ ನಾವು ಚಲಿಸುತ್ತಾ ಇಲ್ಲ. ಹಿಂದಿನ ಕಾಲದಲ್ಲಿ ಯಾವುದು ಕಾರ್ಯಸಾದಕವಾಗಿತ್ತೋ, ಅದೇ ರೀತಿಯಾಗಿ ದೇವರು ಈಗಿನ ಕಾಲದಲ್ಲಿಯೂ ನಡೆಸುತ್ತಾನೆ ಎಂಬುದಾಗಿ ಅಂದುಕೊಳ್ಳುವುದು ಅನಿವಾರ್ಯವಾಗಿ ಕಂಡುಬರುವುದಿಲ್ಲ. ಆದರೆ ದೇವರ ಹೆಜ್ಜೆಯಲ್ಲಿ ನಿಂತುಕೊಳ್ಳುವುದು ಅವಶ್ಯ.

**ಉದಾಹರಣೆಗಳು:**

- ◆ ತಾಮ್ರದ ಸರ್ಪ (ಅರಣ್ಯಕಾಂಡ 21: 8–9, 2 ಅರಸು 18: 4)
- ◆ ಮೋಶೆ ಮತ್ತು ಬಂಡೆಯೊಳಗಿಂದ ನೀರು (ವಿಮೋ 17:6, ಅರಣ್ಯಕಾಂಡ 20: 8)
- ◆ ಸ್ನಾನಿಕನಾದ ಯೋಹಾನ (ಯೋಹಾನ 1: 35–37)
- ◆ ಅಪೋಲ್ಲೋಸನು (ಅ. ಕೃ 18: 24–26)
- ◆ ಎಫೆಸ ಪಟ್ಟಣದ ಸ್ನಾನಿಕನಾದ ಯೋಹಾನನ ಶಿಷ್ಯರು (ಅ. ಕೃ 19: 1–6)

## ಅಭದ್ರತೆಗಳಿಂದ ಬಿಡುಗಡೆ ಹೊಂದುವುದು

ನಮಗಿರುವ ಅಭದ್ರತೆಗಳನ್ನು ಎದುರುಗೊಂಡು ಅವುಗಳಿಂದ ದೂರವಾಗೋಣ..

ದೇವಜನರಿಗೆ ತಂದೆಗಳಂತೆ ಮತ್ತು ತಾಯಿಗಳಂತೆ ಪೋಷಿಸಲು ನಾವು ಎದ್ದೇಳುವ ಅಗತ್ಯತೆ ಇದೆ.

ಪೌಲನಂತೆ ತಿಮೋಥಿಯನ್ನು ಪೋಷಿಸಿ ತನ್ನ ಜೊತೆ ಕೆಲಸದವನಂತೆ ಸೇವಾ ಕಾರ್ಯಗಳಲ್ಲಿ ಉಪಯೋಗಿಸಲು ನಾವು ಶಕ್ತರಾಗಬೇಕಾಗಿದೆ. (ರೋಮಾ 16: 21)

ಮತ್ತು ನಮ್ಮ ಹಾಗೆಯೇ ವಿಶ್ವಾಸಿಗಳು ಕೂಡ ಸೇವಾ ಕಾರ್ಯಗಳನ್ನು ಮಾಡಲು ಶಕ್ತರಾಗುವಂತೆ ಅವಕಾಶ ಮಾಡಿಕೊಡಬೇಕು. (1 ಕೊರಿಂಥ 16: 10)

## ಅಪೋಸ್ತಲ ಮತ್ತು ಪ್ರವಾದಿತ ಕಾರ್ಯಗಳಿಗೆ ತೆರೆದುಕೊಳ್ಳುವುದು

ನೈಜವಾದ ಅಪೋಸ್ತಲ ಮತ್ತು ಪ್ರವಾದಿತ ಸೇವೆಗಳ ಕಡೆಗೆ ಇರುವ ನಮ್ಮ ಮನೋಭಾವನೆಗಳನ್ನು ಬದಲಾಯಿಸಿಕೊಳ್ಳಬೇಕು. ಒಬ್ಬನ ವೈಯಕ್ತಿಕ ಮಟ್ಟದಲ್ಲಿ ಮತ್ತು ಸಭಾ ಸೇವೆಯ ಮಟ್ಟದಲ್ಲಿ, ದೇವರು ಸಭೆಯಲ್ಲಿ ನೇಮಿಸಿರುವ ಐದು ಸೇವಾ ಕಾರ್ಯಗಳಿಗೆ ತೆರೆಯೋಣವು ಅವಶ್ಯವಾಗಿದೆ.

ಅಪೋಸ್ತಲರನ್ನು ಮತ್ತು ಪ್ರವಾದಿಗಳನ್ನು ಸಭೆಯಲ್ಲಿ ನೇಮಿಸಿರುವಂತದ್ದು ದೇವರು (1 ಕೊರಿಂಥ 12: 28). ದೇವರು ಸಭೆಯಲ್ಲಿ ಏನನ್ನು ನೇಮಿಸಿದ್ದಾನೋ ಅದನ್ನು ತೆಗೆದು ಹಾಕುವುದಕ್ಕೆ ಯಾರಿಗೂ ಹಕ್ಕಿಲ್ಲ.

ನಮ್ಮಿಂದ ಮುಂದೆ ಹೋಗಿರುವ ಮತ್ತು ಆತ್ಮನ ಕಾರ್ಯಗಳಲ್ಲಿ ಹೊಸ ಹೊಸ ಹಂತಕ್ಕೆ ನಡೆದಿರುವವರನ್ನು ನೋಡಿ ನಾವು ಕಲಿತುಕೊಳ್ಳಬೇಕು. ಈ ಬೋದನೆಗಳು ಮತ್ತು ಅನುಭವಗಳು ದೇವರ ಪ್ರಕಟಿತ ವಾಕ್ಯವನ್ನು (ಸತ್ಯದ) ಅಲ್ಲಗಳೆಯುವುದಿಲ್ಲ. ಇದಕ್ಕೆ ಬದಲಾಗಿ ಇವುಗಳು ದೇವರು ತನ್ನ ಜನರಿಗಾಗಿ ಆಗಲೇ ಏನನ್ನು ನಿಶ್ಚಯಿಸಿದ್ದಾನೋ ಅವುಗಳೆಲ್ಲವನ್ನು ಪುನಸ್ಥಾಪನೆಗೊಂಡು ಖಚಿತವಾಗುವಂತೆ ಸಾದ್ಯ ಮಾಡುತ್ತವೆ.

## ಅಪೋಸ್ತಲ ಮತ್ತು ಪ್ರವಾದಿತ ಸೇವೆಗಳಿಂದ ನಾವು ಪ್ರಕಟನೆ ಹೊಂದಿಕೊಳ್ಳಬೇಕು.

ನೈಜ್ಯವಾಗಿ ಅಪೋಸ್ತಲ ಮತ್ತು ಪ್ರವಾದಿತ ಕಾರ್ಯಗಳಿಗೆ ನಮ್ಮನ್ನು ನಾವು ತೆರೆದಾಗ ನಮ್ಮಲ್ಲಿ ಕೆಲವರಿಗೆ ಇದನ್ನು ಅರಗಿಸಿಕೊಳ್ಳಲು ಕಷ್ಟಕರವಾಗಿರುತ್ತದೆ. ದೇವರಲ್ಲಿಯೂ ಮತ್ತು ಆತ್ಮನ ವಿಷಯಗಳಲ್ಲಿ ಹಿಂದೆ ಎಂದು ಹೋಗಿರದಂತಹ ಸ್ಥಳಗಳಿಗೆ ಹೋಗಲು ನಮಗೆ ಸವಾಲು ಹೊಡ್ಡುತ್ತದೆ. ದೇವರ ವಾಕ್ಯದಲ್ಲಿ ಹೇಳಲ್ಪಟ್ಟಿರುವ ಗುಪ್ತ ವಿಷಯಗಳನ್ನು ಅರ್ಥ ಮಾಡಿಕೊಳ್ಳಲು ಸಹಾಯವಾಗುತ್ತದೆ. (ಎಫೆಸ 3: 5) ಅಪೋಸ್ತಲ ಮತ್ತು ಪ್ರವಾದಿತ ಸೇವೆಯ ವಿಶೇಷ ಗುಣಲಕ್ಷಣಗಳೆಂದರೆ. ಇವು ನಮ್ಮನ್ನು ಆತ್ಮೀಕವಾದ ಗುಪ್ತ ವಿಷಯಗಳಿಗೆ ಕಣ್ಣು ತೆರೆಯುವಂತೆ ಮಾಡುತ್ತವೆ.

ಅಪೋಸ್ತಲ ಮತ್ತು ಪ್ರವಾದಿತ ಕಾರ್ಯಗಳಿಗೆ ನಾವು ತೆರೆದು ಆಹ್ವಾನಿಸುವಾಗ ನಮ್ಮಲ್ಲಿ ಅನೇಕರಿಗೆ ನಡೆಯುವ ಸಂಗತಿಯೇನೆಂದರೆ, ನಮ್ಮ ಅಸ್ತಿವಾರಗಳನ್ನು ತಿರುಗಿ ಹಾಕಲ್ಪಡಬೇಕಾಗುತ್ತದೆ. ನಮ್ಮ ಸೇವೆಗೆ ಸರಿಯಾದ ದೈವೀಕ ಶಾಸ್ತ್ರ ಜ್ಞಾನದ ಅಸ್ತಿವಾರಗಳು ಇವೆ ಎಂಬುದಾಗಿ ನಾವು ಅಂದುಕೊಂಡಿರಬಹುದು. ಹೇಗಿದ್ದರು, ನಾವು ಅರ್ಥ ಮಾಡಿಕೊಳ್ಳುವ ಸಂಗತಿಯೇನೆಂದರೆ ಇವು ಕೇವಲ ಮನುಷ್ಯ ಕಲ್ಪಿತವಾದ ಕಟ್ಟಿಗೆ, ಹುಲ್ಲು, ಮತ್ತು ಹಾಪು ಎಂಬುವುಗಳ ಮೇಲೆ ಕಟ್ಟಲ್ಪಟ್ಟಿದೆ ಎಂಬುದಾಗಿ. ಕರ್ತನಿಂದ ಮತ್ತು ಕರ್ತನ ವಾಕ್ಯಾನುಸಾರವಾಗಿ ನಾವು ಹಾಕಿರುವ ಕೆಲವು ಅಸ್ತಿವಾರಗಳ ಮೇಲೆ ತಿರಿಗಿ ಅಸ್ಥಿವಾರ ಹಾಕುವಂತೆ ಅಪೋಸ್ತಲ ಮತ್ತು ಪ್ರವಾದಿತ ಸೇವೆಯು ಪ್ರಭಾವ ಬೀರುತ್ತದೆ (1 ಕೊರಿಂಥ 3: 10, ಎಫೆಸ 2: 20–21). ಇದರಿಂದ ಯಾವುದೇ ಮನುಷ್ಯ ಕಲ್ಪಿತವಾದ ಕಾರ್ಯಗಳ ಮೇಲೆ ಆಧಾರಗೊಳ್ಳದೆ, ನಮ್ಮ ಜೀವಿತ ಮತ್ತು ಸೇವೆಯು ಒಂದು ಹೊಸ ತಿರುವನ್ನು ಅಥವಾ ಒಂದು ತಾಜಾವುಳ್ಳ ನೋಟವನ್ನು, ಅಂದರೆ ನಮ್ಮ ಕರ್ತನು ಮತ್ತು ರಾಜನಾಗಿರುವ ಕ್ರಿಸ್ತನನ್ನು ಪ್ರತಿಬಿಂಬಿಸುವ ಹಾಗೆ ಫಲಕಾರಿಯಾಗುತ್ತದೆ.

## ವಿಶ್ವಾಸಿಗಳನ್ನು ಸಜ್ಜುಗೊಳಿಸಲು ಇರುವ ಪ್ರಯೋಗಿಕ ಕೀಲಿಗಳು

### ವಿಶ್ವಾಸಿಗಳಿಗೆ ಗಟ್ಟಿಯಾದ ಆಹಾರವನ್ನು ಒದಗಿಸುವುದು

ವಿಶ್ವಾಸಿಗಳಿಗೆ ಕೇವಲ ಹಾಲು ಕುಡಿಸುತ್ತ ಮತ್ತು ನಿಸ್ಸಾರವಾದ ಸಂದೇಶಗಳೊಂದಿಗೆ ಬೆಳೆಸುತ್ತ ಇರುವುದಾದರೆ ಅವರನ್ನು ಸೇವೆಗಾಗಿ ಸಜ್ಜುಗೊಳಿಸಲು ಅಪೇಕ್ಷಿಸಲಾಗುವುದಿಲ್ಲ ವಿಶ್ವಾಸಿಗಳನ್ನು ಸಕಲ ಸತ್ಕಾರ್ಯಕ್ಕೆ ಸನ್ನದ್ಧರಾಗಿ ಮತ್ತು ಪ್ರವೀಣರನ್ನಾಗಿ ಮಾಡುವಂತದ್ದು ದೇವರ ಪರಿಪೂರ್ಣವಾದಂತ ವಾಕ್ಯವು. (II ತಿಮೋಥೆ 3: 16).

ಹಸು ಮಕ್ಕಳಿಗೆ ಪಾರಮಾರ್ಥಿಕವಾದ ದೇವರ ವಾಕ್ಯವೆಂಬ ಹಾಲು ಅಗತ್ಯ ಎಂಬುದನ್ನು ನಾನು ಅರ್ಥಮಾಡಿಕೊಳ್ಳುತ್ತೇನೆ (1 ಪೇತ್ರ 2: 2) ಆದರೆ ಹಸು ಮಕ್ಕಳು ಬೆಳೆದು ದೇವರ ವಾಕ್ಯವೆಂಬ ಗಟ್ಟಿಯಾದ ಆಹಾರವನ್ನು ಸ್ವೀಕರಿಸಲು ಶಕ್ತರಾಗುವಂತೆ ಪ್ರೋತ್ಸಾಹಿಸಬೇಕು. (ಇಬ್ರಿಯ 5: 12–14)

ದೇವರ ಪರಿಪೂರ್ಣವಾದಂತ ವಾಕ್ಯವನ್ನು ನಾವು ಸಾರಿ ಹೇಳಬೇಕು, ಬೋಧಿಸಬೇಕು ಮತ್ತು ಆತ್ಮನ ವಿಷಯಗಳಲ್ಲಿ ವಿಶ್ವಾಸಿಗಳನ್ನು ತರಬೇತಿಗೊಳಿಸಬೇಕು ಮತ್ತು ಪರಿಶುದ್ದಾತ್ಮನ ವರಗಳಲ್ಲಿ, ಸೂಚಕ ಕಾರ್ಯಗಳಲ್ಲಿ,

ಅದ್ಭುತ ಕಾರ್ಯಗಳಲ್ಲಿ ಮತ್ತು ಮಹತ್ಕಾರ್ಯಗಳಲ್ಲಿ ಕಾರ್ಯಶೀಲರಾಗುವಂತೆ ಮಾಡಬೇಕು. ಕ್ರಿಸ್ತನ ಹಾಗೆ ಆತನ ನಡತೆ ಮತ್ತು ಪರಿಪಕ್ವತೆಯಲ್ಲಿ ಅಭಿವೃದ್ಧಿ ಕಾಣುವಂತೆ ಪ್ರಾಧಾನ್ಯ ನೀಡಬೇಕು.

**ವಿಶ್ವಾಸಿಗಳು ತಮ್ಮ ಕರೆಯನ್ನು ವಿವೇಚಿಸುವಂತೆ ಸಹಾಯಿಸುವುದು**

ವಿಶ್ವಾಸಿಗಳು ತಮ್ಮ ಕರೆಯನ್ನು ವಿವೇಚಿಸುವಂತೆ, ಅವರ ಸ್ಥಳ ಮತ್ತು ಕ್ರಿಸ್ತನ ದೇಹದಲ್ಲಿ ಅವರ ಕಾರ್ಯ ಏನೆಂಬುದನ್ನು ಕಂಡುಕೊಳ್ಳುವಂತೆ ಸಹಾಯಿಸಬೇಕು. ಲೋಕದಲ್ಲಿ ಮತ್ತು ಸ್ಥಳೀಯ ಸಭೆಯ ಸಂದರ್ಭಕ್ಕನುಸಾರವಾಗಿ ನಡೆದು ಕೊಳ್ಳುವುದು ಹೇಗೆ ಎಂಬುದನ್ನು ಕೂಡ ನಾವು ತೋರಿಸಬೇಕು.

ಅನೇಕ ವಿಶ್ವಾಸಿಗಳು ಸಭೆಗಳಲ್ಲಿ ಸೋಮಾರಿಗಳಾಗಿ ತಮ್ಮಲ್ಲಿರುವ ಸಾಮರ್ಥ್ಯವನ್ನು ವ್ಯರ್ಥಗೊಳಿಸುತ್ತಿದ್ದಾರೆ ಕಾರಣವೇನೆಂದರೆ ಸಭೆಯಲ್ಲಿ ಅವರಿಗಿರುವ ಸ್ಥಾನ, ಕಲೆ ಮತ್ತು ಕಾರ್ಯಭಾರಗಳನ್ನು ವಿವೇಚಿಸಲು ಮತ್ತು ಕಂಡುಹಿಡಿಯಲು ಸಹಾಯ ದೊರೆಯುತ್ತಾ ಇಲ್ಲ.

ಪ್ರತಿ ವಿಶ್ವಾಸಿಯು ಸೇವಕನಾಗಿದ್ದಾನೆ ಎಂಬ ಸತ್ಯಾಂಶವನ್ನು ಐದು ಸೇವಾ ಕಾರ್ಯಗಳನ್ನು ನಡೆಸುವ ಸೇವಕರು ಗ್ರಹಿಸಬೇಕು. ಸ್ಥಳೀಯ ಸಭೆಯಲ್ಲಿ ಪ್ರತಿ ವಿಶ್ವಾಸಿಯು ತಮ್ಮ ಕರೆ ಏನೆಂಬುದನ್ನು ಕಂಡು ಹಿಡಿದು ಅದರಲ್ಲಿ ಅದನ್ನು ಪರಿಪೂರ್ಣಗೊಳಿಸಲು ತರಬೇತಿಹೊಂದಿ ತಮ್ಮ ಕರೆಗಳಲ್ಲಿ ಬಿಡುಗಡೆ ಹೊಂದಬೇಕು.

**ವಿಶ್ವಾಸಿಗಳು ಆತ್ಮನಿಂದ ಉಪಯೋಗಿಸಲ್ಪಡುವಂತೆ ಬಲಪಡಿಸಬೇಕು**

ವಿಶ್ವಾಸಿಗಳು ಪರಿಶುದ್ಧಾತ್ಮನಿಂದ ಉಪಯೋಗಿಸಲ್ಪಡುವುದು ಹೇಗೆ ಎಂಬುದನ್ನು ತರಬೇತಿಗೊಳಿಸಬೇಕು. ಮತ್ತು ಭೂಲೋಕದಲ್ಲಿ ಅವರವರ ಸೇವೆಯನ್ನು ಪರಿಪೂರ್ಣಗೊಳಿಸಲು ಸಜ್ಜುಗೊಳಿಸಬೇಕು.

**ಸೇವೆ ಮತ್ತು ಕೆಲಸವನ್ನು ಜೊತೆಗೂಡಿಸಲು ವಿಶ್ವಾಸಿಗಳನ್ನು ಪ್ರೋತ್ಸಾಹಿಸಬೇಕು**

ಯಾರು ಮಾರುಕಟ್ಟೆಯ ಸ್ಥಳಗಳಲ್ಲಿ ಸೇವೆ ಸಲ್ಲಿಸಲು ಕರೆಯಲ್ಪಟ್ಟಿರುತ್ತಾರೋ ಅಂತವರನ್ನು ಸಜ್ಜುಗೊಳಿಸುವಂತೆ ಸ್ಥಳಿಯ ಸಭೆಗಳಲ್ಲಿ ಪ್ರಾರಂಬಿಸಬೇಕು

ಐದು ಸೇವಾ ಕಾರ್ಯವನ್ನು ನಡೆಸುವ ಸೇವಕರು ಮಾರುಕಟ್ಟೆಯ ಸ್ಥಳಗಳಲ್ಲಿ ಎದ್ದೇಳುವಂತೆ ಪ್ರೋತ್ಸಾಹಿಸಬೇಕು.

ಮಾರುಕಟ್ಟೆಯ ಸ್ಥಳಗಳಲ್ಲಿ ವಿಶ್ವಾಸಿಗಳನ್ನು ಸಜ್ಜುಗೊಳಿಸಲು ಬೇಕಾಗಿರುವ ಉತ್ಕೃಷ್ಟವಾದ ಜನರು ಯಾರೆಂದರೆ ಮಾರುಕಟ್ಟೆಯ ಸ್ಥಳಗಳಲ್ಲಿ ಇರುವ ಐದು ಸೇವಾ ಕಾರ್ಯಗಳನ್ನು ನಡೆಸುವ ಸೇವಕರೇ.

ಮಾರುಕಟ್ಟೆಯ ಸ್ಥಳಗಳಲ್ಲಿರುವ ವಿಶ್ವಾಸಿಗಳು ದೇವರ ಸ್ವರವನ್ನು ಕೇಳುವಂತೆ, ಸರಿಯಾದ ತೀರ್ಮಾನಗಳನ್ನು ಮಾಡುವಂತೆ, ಸೇವೆ ಸಲ್ಲಿಸುವಂತೆ ಮತ್ತು ಸಾಕ್ಷಿಗಳಾಗಿರುವಂತೆ ತರಬೇತಿಗೊಳಿಸುವುದು ಅತ್ಯಗತ್ಯವಾಗಿದೆ. ಮಾರುಕಟ್ಟೆಯ ವಿಶ್ವಾಸಿಗಳು ಪವಿತ್ರಾತ್ಮನ ವರಗಳಲ್ಲಿ ನಡೆಯುವಂತೆ ಮತ್ತು ಅವರಿರುವ ಕೆಲಸದ ಕ್ಷೇತ್ರಗಳಲ್ಲಿ ಅದ್ಭುತ ಕಾರ್ಯಗಳನ್ನು ಪ್ರದರ್ಶಿಸುವಂತೆ ತರಬೇತಿ ನೀಡುವದು ಅವಶ್ಯ.

ತಮ್ಮ ಕೆಲಸದ ಕ್ಷೇತ್ರಗಳಲ್ಲಿ ದೇವರ ವಾಕ್ಯದ ತತ್ವಗಳನ್ನು ಅನುಸರಿಸುವುದು ಹೇಗೆ ಎಂಬುದನ್ನು ಮಾರುಕಟ್ಟೆಯ ಪ್ರತಿ ವಿಶ್ವಾಸಿಗಳಿಗೆ ಬೋಧಿಸಿ ಅವರು ಕರ್ತನ ರಾಜ್ಯದ ಪ್ರಭಾವವನ್ನು ಸ್ಥಾಪಿಸುವಂತೆ ಅವಕಾಶ ಕಲ್ಪಿಸುವುದು ಅವಶ್ಯ.

ಕರ್ತನ ರಾಜ್ಯವನ್ನು ಹೇಗೆ ಸ್ಥಾಪಿಸಬೇಕು ಎಂಬುದರ ವಿಷಯದಲ್ಲಿ ಮಾರುಕಟ್ಟೆಯ ಪ್ರತಿ ವಿಶ್ವಾಸಿಗಳನ್ನು ತರಬೇತಿಗೊಳಿಸಬೇಕು. ಅನ್ಯೂನ್ಯತೆಯ ಕೂಟಗಳನ್ನು ಅಥವಾ ಚಿಕ್ಕದಾಗಿ ಸಭೆಯಾಗಿ ಸೇರಿ ಬರುವುದನ್ನು ಮಾರುಕಟ್ಟೆಯ ಸ್ಥಳಗಳಲ್ಲಿ ನಡೆಸುವುದರಿಂದ ದೇವರ ರಾಜ್ಯದ ಬರೋಣವನ್ನು ಇನ್ನೂ ಪ್ರಭಾವಿಸಬಹುದು. ಇವರ ಸಂಪತ್ತನ್ನೂ ಕರ್ತನ ರಾಜ್ಯದ ಉದ್ದೇಶಗಳಿಗಾಗಿ ವರ್ಗಾಯಿಸಲು ಕಾರ್ಯಕಾರಿಯಾಗುತ್ತದೆ.

**ಆಪ್ತ ಸಲಹೆಗಾರನಾಗಿ, ಸಲಹೆಗಳನ್ನು ನೀಡುವ ಸಂಸ್ಕೃತಿಯನ್ನು ಸೃಷ್ಟಿಸಬೇಕು**

ಐದು ಸೇವಾ ಕಾರ್ಯಗಳನ್ನು ನಡೆಸುವ ಸೇವಕರಾದ ನಾವುಗಳು ಅನುಭವಶಾಲಿಯುಳ್ಳ ಸಲಹೆಗಾರರಾಗಿರಬೇಕು ಅಂದರೆ ವಿಶ್ವಾಸಿಗಳಿಗೆ ತಂದೆಗಳು ಮತ್ತು ತಾಯಿಗಳು ಆಗಿರಬೇಕು.

ಬಹಳಷ್ಟು ಜನರಿಗೆ ಒಬ್ಬನೇ ಸಲಹೆ ಕೊಡುವುದು ಅಥವಾ ಮಾರ್ಗ ದರ್ಶನ ತೋರಿಸುವುದು ಸಾದ್ಯವಾಗುವುದಿಲ್ಲ ಆದಕಾರಣ ನಾವು ಕೆಲವರನ್ನು ನಂಬಿಕೆಯ-ಸಲಹೆಗಾರರನ್ನಾಗಿ ಬೆಳೆಸಿ, ಮತ್ತು ಸಲಹೆ ಮಾಡುವ ಸಂಸ್ಕೃತಿಯನ್ನು ನಮ್ಮ ಸಭೆಗಳಲ್ಲಿ ಮತ್ತು ಸೇವಾಕ್ಷೇತ್ರಗಳಲ್ಲಿ ಸೃಷ್ಟಿಸಬೇಕು. ಆಗ ಬೆಳೆದ ವಿಶ್ವಾಸಿಗಳು ಬೇರೆಯವರನ್ನು ನಂಬಿಕೆಯಲ್ಲಿ ತಂದೆಗಳಾಗಿ, ತಾಯಿಗಳಾಗಿ ಪ್ರೋತ್ಸಾಹಿಸಲು ಸಾದ್ಯವಾಗುತ್ತದೆ.

**ಸೇವಾ ಜವಾಬ್ದಾರಿಗಳನ್ನು ನಿಯೋಜಿಸಬೇಕು**

ನಂಬಿಗಸ್ತಿಕೆಯುಳ್ಳ ಮತ್ತು ಸಾಮರ್ಥ್ಯವಾದ ವಿಶ್ವಾಸಿಗಳಿಗೆ ನೂತನವಾದ ಅವಕಾಶಗಳನ್ನು ಕಲ್ಪಿಸಿ, ಸೇವಾ ಜವಾಬ್ದಾರಿಗಳನ್ನು ನಿಯೋಜಿಸಬೇಕು. ಸೇವಾ ಜವಾಬ್ದಾರಿಗಳನ್ನು ನಿಯೋಜಿಸುವ ವಿಷಯವು ಮೋಶೆಯ ದಿನಮಾನಗಳಿಂದಲೂ ಇದೆ, ಅಂದರೆ ಮೋಶೆಯ ಮಾವನಾದ ಇತ್ರೋ ಹೀಗೆ ಮಾಡಲು ಬೋದಿಸಿದನು. (ವಿ. ಕಾ 18)

**ಸೇವಾ ತಂಡವನ್ನು ಬೆಳೆಸಿ, ತಂಡದ ಸಂಸ್ಕೃತಿಯನ್ನು ಸೃಷ್ಟಿಸಬೇಕು**

ಮೊದಲೇ ತಿಳಿಸಿದ ಪ್ರಕಾರ, ನಮ್ಮ ಸೇವಾ ತಂಡದ ಒಂದು ಭಾಗವಾಗಿ ಬೇರೆಯವರನ್ನು ನಮ್ಮ ಜೊತೆಯಲ್ಲಿ ಕೆಲಸ ನಿರ್ವಹಿಸುವಂತೆ ಅವಕಾಶ ಮಾಡಬೇಕು. ತಂಡದ ಸಂಸ್ಕೃತಿಯಲ್ಲಿ ಯಾವುದೇ ಪೈಪೋಟಿ ಇಲ್ಲದಂತೆ, ಬದಲಾಗಿ ಒಟ್ಟಿಗೆ ಸೇರಿ ಕಾರ್ಯ ನಿರ್ವಹಿಸುವ ಪರಿಸರವನ್ನು ಸೃಷ್ಟಿಸಬೇಕು. ಇಂತ ಪರಿಸರದಲ್ಲಿ ತಂಡದ ಪ್ರತಿಯೊಬ್ಬರು, ವಿಶ್ವಾಸಿಗಳನ್ನು ಸಜ್ಜುಗೊಳಿಸುವ ಮತ್ತು ಕರ್ತನಾದ ಯೇಸು ಕ್ರಿಸ್ತನನ್ನು ಮಹಿಮೆ ಪಡಿಸುವ ಒಂದೇ ಗುರಿಯತ್ತ ಕೆಲಸ ನಿರ್ವಹಿಸುವವರಾಗಿರುತ್ತಾರೆ.

**ತಂತ್ರ ಕೌಶಲ್ಯವುಳ್ಳ-ಯುಕ್ತಿಯುಳ್ಳವರಾಗಿರಬೇಕು**

ನಾವು ಯೋಚಿಸಿ ಮತ್ತು ಯುಕ್ತಿಯುಳ್ಳವರಾಗಿ ಕೆಲಸ ನಿರ್ವಹಿಸಬೇಕು ಮತ್ತು ದೇವರು ತನ್ನ ಜನರನ್ನು ಲೋಕದ ಉಪ್ಪನ್ನಾಗಿಯೂ ಮತ್ತು ಬೆಳಕನ್ನಾಗಿಯೂ ಎಬ್ಬಿಸುವಾಗ ನಾವು ಆತನೊಂದಿಗೆ ಪ್ರವಹಿಸಬೇಕು,

ಉದಾಹರಣೆಗೆ ಒಬ್ಬ ವಿಶ್ವಾಸಿಯೂ ತನ್ನ ಕೆಲಸದ ವರ್ಗಾವಣೆಯ ನಿಮಿತ್ತ ಇನ್ನೊಂದು ಜಾಗಕ್ಕೆ ವರ್ಗಾಹಿಸಲ್ಪಡುವಾಗ ತಮ್ಮ ವೃತ್ತಿಯ ಈ ಹೊಸ ಕ್ಷೇತ್ರದಲ್ಲಿ ಅವರಿಗಿರುವ ಒಂದು ಅವಕಾಶವೇನೆಂದರೆ ತಾವಿರುವ ಸ್ಥಳದಲ್ಲಿಯೇ ಸಭೆಯನ್ನು ಕಟ್ಟಬಹುದು ಅಥವಾ ಚಿಕ್ಕದಾದಂತ ಪ್ರಾರ್ಥನ ಗುಂಪುಗಳನ್ನು ಪ್ರಾರಂಬಿಸಬಹುದು. ಈ ರೀತಿಯಾಗಿ ವಿಶ್ವಾಸಿಗಳು ತರಬೇತಿಗೊಳಪಟ್ಟಿದ್ದರೆ ಇದು ಖಚಿತವಾಗಿಯೂ ಸಾದ್ಯವಾಗಿ ಕಂಡುಬರುತ್ತದೆ.

**ದೇವರ ರಾಜ್ಯದ–ಮನಸ್ಸುಳ್ಳವರಾಗಿರಬೇಕು**

ಐದು ಸೇವಾ ಕಾರ್ಯಗಳನ್ನು ನಡೆಸುವ ಸೇವಕರಾದ ನಾವು ದೇವರ ರಾಜ್ಯದ ಮನಸ್ಸಿನವರಾಗಿರುವಂತೆ ಇರುವಂತದ್ದು ಅತೀ ಪ್ರಾಮುಖ್ಯವಾದ ಸಂಗತಿಯಾಗಿದೆ. ಇದರಿಂದ ವಿಶ್ವಾಸಿಗಳು ಕೂಡ ದೇವರ ರಾಜ್ಯದ ಮನಸ್ಸಿನವರು ಆಗಿರುವಂತದ್ದು ಅಂದರೆ ನಮ್ಮದೇ ಆದ ವೈಯಕ್ತಿಕ ಕಾರ್ಯಕಲಾಪಗಳು–ಸಂಸ್ಥೆಗಳು ಮತ್ತು ಸೇವೆಗಳ ಮೇಲೆ ದೇವರ ರಾಜ್ಯದ ಸಂಕಲ್ಪಗಳನ್ನು ಮತ್ತು ರಾಜನ ಮಹಿಮೆಯನ್ನು ಸ್ಥಾಪಿಸುವಂತದ್ದು.

**ಒಂದು ವೇಳೆ ನಾವು ಈ ಬದಲಾವಣೆಯನ್ನು ಮಾಡದೆ ಹೋದರೆ!**

ಐದು ಸೇವಾ ಕಾರ್ಯಗಳನ್ನು ನಡೆಸುವ ಸೇವಕರುಗಳಾದ ನಾವು, ದೇವರ ಈ ಹೊಸ ತಿರುವಿಗೆ ಬದಲಾವಣೆಯನ್ನುಂಟು ಮಾಡಲು ವಿಫಲರಾದರೆ, ವಿಶ್ವಾಸಿಗಳ ಚಳುವಳಿಯು ನಾನಾತರವಾಗಿ ಗಂಬೀರವಾದ ಪ್ರತಿಫಲವನ್ನುಂಟು ಮಾಡುತ್ತದೆ.

## ಪರಿಣಾಮವನ್ನುಂಟುಮಾಡುವ ಕೊರತೆ

ಒಂದು ವೇಳೆ ನಾವು ದೇವರ ಹೊಸ ತಿರುವಿನಲ್ಲಿ ಬದಲಾವಣೆಯನ್ನುಂಟುಮಾಡಲು ವಿಫಲರಾದರೆ, ವಿಶ್ವಾಸಿಗಳ ಮೇಲೆ ಇರುವ ನಮ್ಮ ಪ್ರಾಬಲ್ಯತೆ ಮತ್ತು ಮಹತ್ತರವಾದ ಪರಿಣಾಮವು ಅಳಿದು ಹೋಗುತ್ತದೆ. ತಮ್ಮ ಆತ್ಮೀಕ ಬೆಳವಣಿಗೆಗೆ, ಪರಿಪಕ್ವತೆಗೆ ಮತ್ತು ರಾಜ್ಯದ ಉಪಯೋಗಕ್ಕಾಗಿ ಪ್ರಾಮಾಣಿಕವಾದ ಆಕಾಂಕ್ಷೆಯಿರುವ ವಿಶ್ವಾಸಿಗಳನ್ನು ಸಜ್ಜುಗೊಳಿಸಿ ಸೇವೆಗೆ ಅವಕಾಶವನ್ನುಂಟು ಮಾಡುತ್ತಾರೋ ಅಂತವರೊಂದಿಗೆ ಸೇರಿಕೊಳ್ಳುತ್ತಾರೆ.

**ದೇವರು ಕೊಟ್ಟ ಕಾರ್ಯಕ್ಕೆ ವಿಫಲರಾದ ಕಾರಣ ನ್ಯಾಯ ತೀರ್ಪು**

ಐದು ಸೇವಾ ಕಾರ್ಯಗಳನ್ನು ಮಾಡುವ ಸೇವಕರಿಗೆ ದೇವರು ಕೊಟ್ಟಿರುವ ಕೆಲಸವೇನೆಂದರೆ ವಿಶ್ವಾಸಿಗಳನ್ನು ಸೇವಾ ಕಾರ್ಯಗಳಿಗೋಸ್ಕರ ಸಜ್ಜುಗೊಳಿಸುವಂತದ್ದು ಐದು ಸೇವಾ ಕಾರ್ಯಗಳನ್ನು ಮಾಡುವ ಸೇವಕರಾದ ನಾವುಗಳೇ, ಇದನ್ನು ಮಾಡುವುದರಲ್ಲಿ ವಿಫಲರಾದರೆ ದೇವರು ಕೊಟ್ಟ ಕೆಲಸದಲ್ಲಿ ವಿಫಲರಾಗುತ್ತೇವೆ. ಕ್ರಿಸ್ತನ ನ್ಯಾಯಸನದ ಮುಂದೆ ನಾವೆಲ್ಲರೂ ಯತಾಸ್ಥಿತಿಯಲ್ಲಿ ಕಾಣಿಸಿಕೊಳ್ಳುವಾಗ, ಪ್ರತಿಯೊಬ್ಬರು ಆತನ ಮುಂದೆ ಲೆಕ್ಕ ಒಪ್ಪಿಸಬೇಕು, ಆಗ ನಾವು ಕೊರತೆಯುಳ್ಳವರಾಗಿ ಕಂಡುಬರುತ್ತೇವೆ. (2 ಕೋರಿಂಥ 5: 9–10).

# 5

# ಪಟ್ಟಣ ವ್ಯಾಪಕವಾದ ಸಭೆ

## ಪಟ್ಟಣ ವ್ಯಾಪಕ ಸಭೆಯಲ್ಲಿ ನೂತನವಾದ ಚೈತನ್ಯವುಳ್ಳ ಚಟುವಟಿಕೆಗಳು

ಪಟ್ಟಣ ವ್ಯಾಪಕ ಸಭೆಯು ಸಜ್ಜುಗೊಳಿಸಲ್ಪಟ್ಟು ಬಿಡುಗಡೆಗೊಳಿಸಲ್ಪಟ್ಟಾಗ ಆ ಪಟ್ಟಣಕ್ಕೆ, ನಗರಕ್ಕೆ ಮತ್ತು ಅಲ್ಲಿನ ಹಳ್ಳಿಗಳಿಗೆ ಉಂಟಾಗುವುದೇನು?

ತಮ್ಮ ದೈನಂದಿನ ಬಾನುವಾರದ ಕೂಟಗಳಿಗೆ ಬದಲಾಗಿ ಸಭೆಯು ಬಹಳಷ್ಟು ಸಾರಿ ಮಾರುಕಟ್ಟೆಯ ಸ್ಥಳಗಳಲ್ಲಿ ಸಂದಿಸುತ್ತದೆ. ಬೇರೆ ಬೇರೆ ಸ್ಥಳೀಯ ಸಭೆಗಳಿಂದ ವಿಶ್ವಾಸಿಗಳು ವಾರದಲ್ಲಿ 5 ರಿಂದ 6 ದಿನಗಳ ವರೆಗೆ ಮಾರುಕಟ್ಟೆಯ ಸ್ಥಳಗಳಲ್ಲಿ ಒಟ್ಟಾಗಿ ಸಂಧಿಸುತ್ತಾರೆ. ಈ ವಿಶ್ವಾಸಿಗಳು ತಮ್ಮದೇ ಆದ ಸ್ಥಳೀಯ ಸಭೆಗಳಲ್ಲಿ ವಾರಕ್ಕೆ ಒಂದಾವರ್ತಿ ಅಥವಾ 2 ಸಾರಿ ಮಾತ್ರ ಸಂಧಿಸಬಹುದು. ಈ ಎಲ್ಲಾ ವಿಶ್ವಾಸಿಗಳು ಮಾರುಕಟ್ಟೆಯ ಸ್ಥಳಗಳಲ್ಲಿ ದೇವರನ್ನು ಪ್ರದರ್ಶಿಸುವಂತೆ ಸಜ್ಜುಗೊಳ್ಳುವರು. ಇವರ ಸಾಮಾನ್ಯವಾದ ವಿಭಿನ್ನತೆಯ ಗುರುತು ಏನೆಂದರೆ ಕ್ರಿಸ್ತನ ಆಧಿಪತ್ಯದಲ್ಲಿ ನಡೆಯುವಂತವರಾಗಿರುತ್ತಾರೆ. ಸ್ಥಳೀಯ ಸಭೆಗಳ ಹೆಸರು, ಸಂಸ್ಥೆಯ ಪಂಗಡಗಳು ಮತ್ತು ಸೇವೆಯ ಗುರುತಿಸುವಿಕೆ, ಇವೆಲ್ಲವೂ ಅಳಿದು ಹೋಗುತ್ತವೆ ಮತ್ತು ಯಾವ ಪ್ರಾಮುಖ್ಯತೆಗೂ ನಿಲ್ಲುವುದಿಲ್ಲ.

ದೇವರಿಂದ ನೇಮಿಸಲ್ಪಟ್ಟ ನಾಯಕರುಗಳು ಸಬೆಯ ಮದ್ಯದಲ್ಲಿ ಎದ್ದೇಳುವರು ಮತ್ತು ಮಾರುಕಟ್ಟೆಯ ಸ್ಥಳಗಳಲ್ಲಿ ಒಟ್ಟಾಗಿ ಸೇರಿ ದೇವರಿಗೆ ಮಹಿಮೆಯನ್ನುಂಟುಮಾಡುವರು.

ಇದರ ಫಲಕಾರಿಯಾಗಿ, ನಾವು ನೋಡುವುದೇನೆಂದರೆ ಎಲ್ಲರೂ ಒಟ್ಟಾಗಿ ಪ್ರಾರಂಬಿಸಿ ಸ್ಥಳೀಯ ಸಭೆಗಳಿಗೆ ಅಗತ್ಯವಾದ ಸಂಪನ್ಮೂಲಗಳನ್ನು ಪೂರೈಸಿ ಇಡೀ ಪಟ್ಟಣವನ್ನೇ ಪರಿಣಾಮಗೊಳಿಸಬಹುದು. ಒಂದೇ ಸ್ಥಳೀಯ ಸಭೆಯು

ಪಟ್ಟಣಕ್ಕೋಸ್ಕರ ಎಲ್ಲವನ್ನು ಮಾಡುವಂತದ್ದಾಗುವ ಸ್ಥಿತಿಯು ಇನ್ನು ಮುಂದೆ ಇರುವುದೇ ಇಲ್ಲ.

ಪಟ್ಟಣ ವ್ಯಾಪಿತವಾದ ಸಭೆಯು ಪ್ರಾರಂಭಿತವಾಗಿ ಸ್ಥಳೀಯ ಸಭೆಗಳಿಗೆ ಅಗತ್ಯವಾದ ವಿಶ್ವಾಸಿಗಳ ಸಂಪನ್ಮೂಲಗಳನ್ನು ಪೂರೈಸುವಲ್ಲಿ, ದೇವರಿಂದ ನೇಮಿಸಲ್ಪಟ್ಟ ಅಪೋಸ್ತಲರ ನಾಯಕತ್ವದ ಮಾರ್ಗ ದರ್ಶನದಲ್ಲಿ ನಡೆಯುವಾಗ ನಮ್ಮ ಪಟ್ಟಣಕ್ಕೆ ಬೀರುವ ಪ್ರಭಾವ ಏನು ಎಂಬುದನ್ನು ನೋಡುತ್ತೀರಾ? ಸ್ವಲ್ಪ ಯೋಚಿಸಿ: ಆರಾಧನಾ ತಂಡಗಳು, ಸುವಾರ್ತಿಕ ಯೌವನಸ್ಥರ ತಂಡಗಳೂ, ಬೀದಿ ಬೀದಿಯ ಸುವಾರ್ತಿಕ ತಂಡಗಳು, ಮದ್ಯಸ್ಥಿಕೆಯ ಪ್ರಾರ್ಥನ ಗುಂಪುಗಳು ಮತ್ತು ಇತರೆ ಕೌಶಲ್ಯವುಳ್ಳ ಮಾರುಕಟ್ಟೆಯ ಸುವಾರ್ತಾ ತಂಡಗಳು, ಸಮಾಜ ಸೇವೆಗಳನ್ನೊಳಗೊಂಡ ಬೀದಿ ಮಕ್ಕಳಿಗೆ, ಬಡವರಿಗೆ, ದಿಕ್ಕಿಲ್ಲದವರಿಗೆ ಸಹಾಯ ಮಾಡುವುದು. ಈ ನಿರ್ದಿಷ್ಟವಾದ ಸೇವಾ ಕಾರ್ಯಗಳು ವಿಶ್ವಾಸಿಗಳಲ್ಲಿ ಯಾರು ಆಕಾಂಕ್ಷೆಯುಳ್ಳವರಾಗಿರುತ್ತಾರೋ ಅವರು ಮಾಡಲು ಶಕ್ತರಾಗಿರುತ್ತಾರೆ. ಈ ಕಾರಣದಿಂದ ಪಟ್ಟಣ ವ್ಯಾಪ್ತಿ ಸಭೆಯು ಸಮಾಜದಲ್ಲಿ ಒಂದು ಶಕ್ತಿಯುತವಾದ ಶಬ್ದದ ಪರಿಣಾಮವನ್ನುಂಟು ಮಾಡುತ್ತದೆ. ಮತ್ತು ಇಡೀ ಪಟ್ಟಣವನ್ನೇ ಬದಲಾಯಿಸುವ ಪ್ರಾಬಲ್ಯತೆಯನ್ನು ಹೊಂದಿರುತ್ತದೆ. ಪಟ್ಟಣ ವ್ಯಾಪ್ತಿಯ ಸಭೆಯ ಬದಲಾವಣೆಗೊಂಡಾಗ ಇಡೀ ಪಟ್ಟಣವೇ ರೂಪಾಂತರಗೊಳ್ಳುತ್ತದೆ.

## ರಾಜ್ಯದ ಮನೋಭಾವವನ್ನು ಬೆಳೆಸಿಕೊಳ್ಳುವುದು

ಪರಿಪೂರ್ಣವಾದ ವಿಶ್ವಾಸಿಗಳನ್ನೊಳಗೊಂಡ ಅಂದರೆ ಸಜ್ಜುಗೊಳಿಸಲ್ಪಟ್ಟು ಸಭೆಯಲ್ಲಿ ಸೇವೆಗೋಸ್ಕರ ಬಿಡುಗಡೆ ಗೊಳಿಸಲ್ಪಟ್ಟ, ಪಟ್ಟಣ ವ್ಯಾಪ್ತಿಯ ಸಭೆಯನ್ನು ಎಬ್ಬಿಸಲು ನಾವು ಜೊತೆ ಕೆಲಸ ಮಾಡುವುದು ಹೇಗೆ?

ನಾವು ಮುಂಚೆ ತಿಳಿಸಿದ ಹಾಗೆ, ಬೇರೆ ಬೇರೆ ಸಭೆಗಳಿಂದ ವಿಶ್ವಾಸಿಗಳು ಒಂದು ಸಾಮಾನ್ಯವಾದ ಸ್ಥಳಕ್ಕೆ ಅಂದರೆ ವೃತ್ತಿಯ ಕ್ಷೇತ್ರದಲ್ಲಿ ಸಂಧಿಸುತ್ತಾರೆ. "ನನ್ನ ಸಭೆಯೇ ಉತ್ತಮ" ಎಂಬ ಮನೋಭಾವನೆಗಳನ್ನು ತೊರೆದು, ಈ ವಿಶ್ವಾಸಿಗಳು ಒಂದು ತಂಡವಾಗಿ ಕೆಲಸಮಾಡಿ ತಮ್ಮ ವೃತ್ತಿ ಕ್ಷೇತ್ರಗಳನ್ನು ಪ್ರಭಾವಿಸುವಂತೆ ಪ್ರೋತ್ಸಾಹಿಸಬೇಕು. ಬೇರೆ ಬೇರೆ ಸ್ಥಳೀಯ ಸಭೆಯ ವಿಶ್ವಾಸಿಗಳು

ತಮ್ಮ ವೃತ್ತಿ ಕ್ಷೇತ್ರ ಪಟ್ಟಣ ವ್ಯಾಪ್ತಿಯ ಸಭೆಗಳಿಗಿರುವ ದೇವರ ಆಜ್ಞೆಗಳನ್ನು ಮೀರದೆ, ಹೇಗೆ ಜೊತೆಕೆಲಸ ಮಾಡಬೇಕು ಎಂಬುದನ್ನು ಬೋಧಿಸದೇ ಮತ್ತು ತರಬೇತಿಗೊಳಿಸದೆ ಹೋದರೆ, ದೇವರ ರಾಜ್ಯದ ಉದ್ದೇಶಗಳು ಸ್ಥಾಪಿತವಾಗುವುದಿಲ್ಲ.

ಪಟ್ಟಣ ವ್ಯಾಪ್ತಿಯ ಸಭೆಗಳನ್ನು ಪ್ರಾರಂಬಿಸಲು ಮತ್ತು ಅಗತ್ಯವಾದ ಸಂಪನ್ಮೂಲಗಳಾದ ಜನರು, ಸಮಯ ಮತ್ತು ಹಣ ಇವುಗಳನ್ನು ಒದಗಿಸಿ, ಸ್ಥಳೀಯ ಸಭೆಯ ತಡೆಗಳನ್ನು ದಾಟಿ ಪಟ್ಟಣದಲ್ಲಿ ದೇವರ ರಾಜ್ಯವನ್ನು ಸ್ಥಾಪಿಸುವ ಒಂದೇ ಉದ್ದೇಶ ಉಳ್ಳವರಾಗುವಂತೆ ಅಪೋಸ್ತಲ ನಾಯಕರು ತಮ್ಮ ನಾಯಕತ್ವದ ಮಾರ್ಗ ದರ್ಶನವನ್ನು ಒದಗಿಸಲು ಸಿದ್ಧವಾಗಬೇಕು. **ಯಾವುದೇ ಸ್ಥಳೀಯ ಸಭೆಯನ್ನಾಗಲಿ, ಮನುಷ್ಯನನ್ನಾಗಲಿ ಅಥವಾ ಸೇವೆಯನ್ನಾಗಲಿ ಮೇಲಕ್ಕೆತ್ತದ ಹಾಗೆ ನೋಡಿಕೊಳ್ಳಬೇಕು.**

ಒಟ್ಟಾಗಿ ಸೇರಿ ಕಾರ್ಯ ನಿರ್ವಹಿಸುವ ದೃಡ ಪ್ರಯತ್ನದಿಂದ ಆತ್ಮಗಳು ರಕ್ಷಣೆ ಹೊಂದಿ ಅನೇಕರ ಜೀವಿತಗಳು ಬದಲಾವಣೆಯಾಗುವಾಗ, ಈ ಹೊಸ ವಿಶ್ವಾಸಿಗಳು ಒಂದು ಒಳ್ಳೆಯ ಮತ್ತು ಸತ್ಯವೇದವನ್ನು ಅಂಗೀಕರಿಸುವ ಮತ್ತು ಅವರಿಗೆ ಸೂಕ್ತವಾದ ಸ್ಥಳೀಯ ಸಭೆಗಳಿಗೆ ಭಾಗಿಗಳಾಗುವಂತೆ ಪ್ರೋತ್ಸಾಹಿಸಬೇಕು. ಇಂತ ಸ್ಥಳೀಯ ಸಭೆಗಳಲ್ಲಿ ಅವರು ಸಜ್ಜುಗೊಂಡು ಒಳ್ಳೆಯ ಶಿಷ್ಯರಾಗುವಂತೆ ಸಾದ್ಯವಾಗುತ್ತದೆ. ಯಾವ ಸ್ಥಳೀಯ ಸಭೆಗಳಿಗೆ ಅವರು ಸೇರಿರುತ್ತಾರೋ ಅದು ಪ್ರಾಮುಖ್ಯವಾಗಿ ಕಂಡು ಬರುವುದಿಲ್ಲ ಕಾರಣವೇನೆಂದರೆ ನಾವು ಆತನ ರಾಜ್ಯವನ್ನು ಜನರ ಹೃದಯಗಳಲ್ಲಿ ಮತ್ತು ಜೀವಿತಗಳಲ್ಲಿ ವಿಸ್ತರಿಸುವಂತೆ ನೋಡುತ್ತಿದ್ದೇವೆ. ಎಲ್ಲಾ ಸ್ಥಳೀಯ ಸಭೆಗಳ ಬೆಳವಣಿಗೆ ಮತ್ತು ವಿಸ್ತರಣೆ ಸ್ವಾಭಾವಿಕವಾಗಿ ಕಂಡುಬರುತ್ತದೆ.

## ವಿಶ್ವಾಸಿಗಳ ಚಳುವಳಿ ಮತ್ತು ಪಟ್ಟಣ ರೂಪಾಂತರ

ಸಾಮಾನ್ಯ ವಿಶ್ವಾಸಿಗಳಾದ ಸ್ತೆಫನ ಮತ್ತು ಫಿಲಿಪ್ಪರು ಪವಿತ್ರಾತ್ಮಭರಿತರಾಗಿ ನಂಬಿಕೆಯಲ್ಲಿ, ಶಕ್ತಿಯಲ್ಲಿ, ಸೂಚಕ ಕಾರ್ಯಗಳಲ್ಲಿ ಮತ್ತು ಅದ್ಭುತ ಕಾರ್ಯಗಳಲ್ಲಿ ಒಳಗೊಂಡಿದ್ದು ಯೆರುಸಲೇಮ್ ಮತ್ತು ಸಮಾರ್ಯ ಪಟ್ಟಣಗಳ ಮೇಲೆ ಪ್ರಭಾವವನ್ನುಂಟು ಮಾಡಿದರು. (ಅ. ಕೃ 6: 8; 8: 5–8)

ಇದೇ ರೀತಿಯಾಗಿ ಪೊನೇಸಿಯಾ, ಸಿಪ್ರಸ್ ದ್ವೀಪ ಮತ್ತು ಅಂತಿಯೋಕ್ಯದಲ್ಲಿ ಯೆರುಸಲೇಮಿನಿಂದ ಹೊರಟ ವಿಶ್ವಾಸಿಗಳ ಮೂಲಕ ಸುವಾರ್ತೆಯು ಫಲವಾಗಿ ಹಬ್ಬಿತು. (ಅ. ಕೃ 11: 19–21) ಸೂಚಕ ಕಾರ್ಯಗಳ ಮೂಲಕ ಮತ್ತು ಅದ್ಭುತ ಕಾರ್ಯಗಳ ಮೂಲಕ ಸುವಾರ್ತೆಯನ್ನು ಸಾರುತ್ತಾ ದೇವರ ರಾಜ್ಯವನ್ನು ಸ್ಥಾಪಿಸುತ್ತಾ, ಅನೇಕ ಸಭೆಗಳನ್ನು ಕಟ್ಟುತ್ತಾ ಈ ಸಾಮಾನ್ಯ ವಿಶ್ವಾಸಿಗಳು ಕೆಲಸ ನಿರ್ವಹಿಸುತ್ತಾ ಇದ್ದರು.

ಅದೇ ರೀತಿಯಾಗಿ ವಿಶ್ವಾಸಿಗಳು ಸೂಚಕ ಕಾರ್ಯಗಳನ್ನು ಪ್ರದರ್ಶಿಸುವುದರಲ್ಲಿ ಅದ್ಭುತ ಮತ್ತು ಮಹತ್ಕಾರ್ಯಗಳನ್ನು ಮಾಡುವುದರಲ್ಲಿ ಸಜ್ಜುಗೊಳಿಸಲ್ಪಟ್ಟಾಗ, ಇಡೀ ಪಟ್ಟಣವೇ ರೂಪಾಂತರಗೊಳ್ಳುವುದನ್ನು ನಾವು ನೋಡಲಿದ್ದೇವೆ.

ಪಟ್ಟಣ ರೂಪಾಂತರಗೊಳ್ಳುವುದಕ್ಕೋಸ್ಕರ ಅನೇಕ ಸಾರಿ ನಮ್ಮ ಪ್ರಯತ್ನಗಳು ನಾಯಕರುಗಳನ್ನು ಮತ್ತು ಸೇವಕರುಗಳನ್ನು ಒಟ್ಟುಗೂಡಿಸುವುದರಲ್ಲಿ ಒಳಗೊಂಡಿದೆ. ಇದು ಪ್ರಾಮುಖ್ಯವಾದದ್ದು ಮತ್ತು ಅವಶ್ಯಕ. ಹೇಗಿದ್ದರು ವಿಶ್ವಾಸಿಗಳ ಚಳುವಳಿಯ ಮೂಲಕ ಇಡೀ ಪಟ್ಟಣವೇ ಜನ ಸಾಮಾನ್ಯರಿಂದ ರೂಪಾಂತರಗೊಳ್ಳುತ್ತದೆ.

ಅನಾಮಿಕವಾದ ಯಾವುದೇ ಆಕಾರವಿಲ್ಲದ ವಿಶ್ವಾಸಿಗಳ ಜನಾಂಗವು ಎದ್ದು ಬರುವುದನ್ನು ನಾವು ನೋಡಲಿದ್ದೇವೆ. ಈ ಜನಾಂಗವು ಪಟ್ಟಣದ ಮೇಲೆ ಪ್ರಭಾವ ಬೀರುವಂತದ್ದಾಗಿದೆ.

## ಪಟ್ಟಣದಲ್ಲಿ ಅಪೋಸ್ತಲರನ್ನು ಮತ್ತು ಪ್ರವಾದಿಗಳನ್ನು ಗುರುತಿಸುವುದು

ಪಟ್ಟಣ ರೂಪಾಂತರಕ್ಕೆ ಒಂದು ಪ್ರಾಮುಖ್ಯವಾದ ಕೀಲಿ ಯಾವುದೆಂದರೆ ಅಪೋಸ್ತಲರು ಪಟ್ಟಣದಲ್ಲಿ ಇರುವಂತದ್ದೇ. ಅಪೋಸ್ತಲರು ಇರುವಂತದ್ದು ಮತ್ತು ಅಪೋಸ್ತಲ ಸೇವೆಗಳು ಬರುವುದು ಮತ್ತು ಹೋಗುವುದು ಸಾಕಾಗುವುದಿಲ್ಲ. ಅಪೋಸ್ತಲರು ಪಟ್ಟಣದಲ್ಲಿಯೇ ವಾಸಿಸಲು ಅಗತ್ಯವಿದೆ. ಮತ್ತು ಪಟ್ಟಣಕ್ಕಾಗಿ ಪರಿಪೂರ್ಣವಾಗಿ ಒಪ್ಪಿಸಿಕೊಟ್ಟು, ಆ ಪಟ್ಟಣದ ರೂಪಾಂತರಕ್ಕೆ ಬೇಕಾದ ದರ್ಶನ, ಕೌಶಲ್ಯತೆ ಮತ್ತು ನಾಯಕತ್ವವನ್ನು ಒದಗಿಸುವಂತವರಾಗಿರಬೇಕು.

ಪಟ್ಟಣ ವ್ಯಾಪ್ತಿಯ ಸಭೆಯು ಏಳುವಂತೆ ಮತ್ತು ಪಟ್ಟಣದಲ್ಲಿ ಒಂದು ಸಾಮರ್ಥ್ಯವುಳ್ಳ ಸಮೂಹವಾಗುವಂತೆ ನೋಡಲು, ಪಟ್ಟಣದಲ್ಲಿ ಅಪೋಸ್ತಲರ ಮತ್ತು ಪ್ರವಾದಿಗಳ ಅವಶ್ಯಕತೆ ಇದೆ.

ಪಟ್ಟಣದಲ್ಲಿ ವಾಸವಾಗಿರುವ ಅಪೋಸ್ತಲರು ಮತ್ತು ಪ್ರವಾದಿಗಳು–ಇವರು ಸೇವೆಯಲ್ಲಿ ಕಾರ್ಯನಿರ್ವಹಿಸುವಂತವರು ಅಥವಾ ಮಾರುಕಟ್ಟೆಯ ಸ್ಥಳಗಳಲ್ಲಿ ಸೇವೆ ಸಲ್ಲಿಸುವಂತವರು ಆಗಿರಬಹುದು, ಇಂತ ಪ್ರಾಮಾಣಿಕತೆಯುಳ್ಳವರನ್ನು ಪಟ್ಟಣದಲ್ಲಿರುವ ಕ್ರಿಸ್ತನ ದೇಹವು ಗುರುತಿಸುವುದನ್ನು ಪ್ರಾರಂಬಿಸಬೇಕು. ಅಪೋಸ್ತಲರನ್ನು ಮತ್ತು ಪ್ರವಾದಿಗಳನ್ನು ಸಭೆಯಲ್ಲಿಯು ಮತ್ತು ಮಾರುಕಟ್ಟೆಯ ಸ್ಥಳಗಳಲ್ಲಿಯೂ ನಾವು ಗುರುತಿಸಬೇಕಾಗಿದೆ.

ಬೆಂಗಳೂರಿನಂತ ದೊಡ್ಡ ಪಟ್ಟಣದಲ್ಲಿ, ಸ್ಪಷ್ಟವಾಗಿ ನೋಡುವುದಾದರೆ ಅನೇಕ ಪ್ರಮಾಣಿಕವಾದ ಅಪೋಸ್ತಲ ಮತ್ತು ಪ್ರವಾದಿತ ನಾಯಕರುಗಳಿದ್ದಾರೆ. ದೇವರು ಎಬ್ಬಿಸುವ ಈ ನಾಯಕರು ಪಟ್ಟಣ ವ್ಯಾಪ್ತಿಯ ದರ್ಶನ ಪಟ್ಟಣದ ಒಂದು ನಿರ್ದಿಷ್ಟವಾದ ಜಾಗದಲ್ಲಿ ದೇವರ ರಾಜ್ಯವನ್ನು ಸ್ಥಾಪಿಸುವುದಕ್ಕೆ ಸ್ಪಷ್ಟವಾದ ಚಿತ್ರಣವನ್ನು ಒದಗಿಸುತ್ತಾರೆ. ಪಟ್ಟಣದ ಅಥವಾ ಸಮಾಜದ ಕಾರ್ಯಕ್ಷೇತ್ರಗಳಲ್ಲಿ ಅಥವಾ ರಂಗವಲಯಗಳಲ್ಲಿ ಆಕ್ರಮಿಸುವಂತೆ ಬೇಕಾದ ಅಪೋಸ್ತಲ ನಾಯಕತ್ವವನ್ನು ಅವರು ಒದಗಿಸುವರು. ತಮ್ಮ ಪ್ರಯತ್ನದಿಂದ ಇಡೀ ಪಟ್ಟಣವನ್ನೇ ರೂಪಾಂತರ ಗೊಳಿಸುವ ಅಪೋಸ್ತಲ ನಾಯಕರುಗಳು ವಿಶಾಲವಾಗಿ ಎದ್ದು ಬರುವುದನ್ನು ನಾವು ನೋಡಲಿದ್ದೇವೆ.

ಒಂದು ಸಾಮಾನ್ಯವಾದ ಸಮಸ್ಯೆಯೇನೆಂದರೆ ಪಟ್ಟಣದಲ್ಲಿನ ಈ ಅಪೋಸ್ತಲ ನಾಯಕರುಗಳು ಜವಾಬ್ದಾರಿಯನ್ನು ತೆಗೆದುಕೊಳ್ಳಲು ಸಿದ್ದರಿಲ್ಲ. ಸಮಾಜದ ಒಂದು ನಿರ್ದಿಷ್ಟವಾದ ಕಾರ್ಯ ಕ್ಷೇತ್ರದಲ್ಲಿ ಪ್ರವೇಶಿಸಿ ಪಟ್ಟಣ ವ್ಯಾಪ್ತಿ ಸಭೆಯ ಪ್ರಯತ್ನಗಳು ಹರಡಿಕೊಳ್ಳುವಂತೆ ಅಪೋಸ್ತಲ ನಾಯಕರುಗಳು ಜವಾಬ್ದಾರಿ ವಹಿಸಬೇಕು.

ಇದಕ್ಕೆ ಬದಲಾಗಿ ನಮ್ಮದೇ ಆದ ಸಭೆಗಳಲ್ಲಿ ಮತ್ತು ಸೇವೆಗಳಲ್ಲಿ ಆರಾಮವಾಗಿ ಉಳಿದುಕೊಳ್ಳುತ್ತೇವೆ. ಇದಕ್ಕೆ ಕಾರಣವೇನೆಂದರೆ ಕೆಲವು ಸಾರಿ ನಮಗೆ ಸಂಕುಚಿತ

ಸ್ವಭಾವ ಇರುವುದರಿಂದ ಇಂತ ಸ್ವಭಾವಕ್ಕೆ ದೇವರ ರಾಜ್ಯದ ಮನಸ್ಸನ್ನು ನಮ್ಮಲ್ಲಿ ಹೊಸತು ಪಡಿಸುವ ಅವಶ್ಯವಿದೆ. ಇನ್ನೂ ಕೆಲವು ಸಾರಿ ಜೊತೆ ಸೇವಕರುಗಳಿಂದ ಅಪಾರ್ಥ ಕಲ್ಪಿಸಿಕೊಂಡು ಭಯಕ್ಕಿಡಾಗುತ್ತೇವೆ. ಈ ಕಾರಣದಿಂದ ಒಂದು ಹೆಜ್ಜೆ ಮುಂದೆ ಸಾಗಲು ಸಿದ್ಧವಾಗಿಲ್ಲ. ಈ ರೀತಿಯಾದ ಜೊತೆಯಾಗಿ ಕಾರ್ಯ ನಿರ್ವಹಿಸುವ ಪಟ್ಟಣ ವ್ಯಾಪ್ತಿಯ ಪ್ರಯತ್ನವನ್ನು ನಡೆಸಲು ಸುಲಭವಲ್ಲ. ಸವಾಲುಗಳು ಮಹತ್ತರವಾಗಿವೆ. ಸ್ಥಳೀಯ ಸಭೆಗಳಿಂದ ಮತ್ತು ಸೇವೆಗಳಿಂದ ಬಹಳಷ್ಟು ಸಮಯ ಮತ್ತು ಪ್ರಯತ್ನವನ್ನು ಇದು ಕೋರುವಂತದ್ದಾಗಿದೆ. ಆದರೆ ಯಾವುದು ಬಹು ಪ್ರಾಮುಖ್ಯವಾಗಿದೆ ಎಂಬುದನ್ನು ಮತ್ತು ಸೇವೆಗಳನ್ನು ಕಟ್ಟುವುದೋ ಅಥವಾ ಪಟ್ಟಣದಲ್ಲಿ ಪರಿಪೂರ್ಣವಾದ ದೇವರ ರಾಜ್ಯ ಸ್ಥಾಪಿತವಾಗಿ ಸಹಸ್ರಾರು ಜನರು ರಕ್ಷಣೆ ಹೊಂದುವಂತೆ ನೋಡುವುದೋ? ದೇವರ ರಾಜ್ಯದ ಮನಸ್ಸಿನವರಾಗಿರುವಂತೆ ಪಟ್ಟಣ ವ್ಯಾಪ್ತಿಯ ಸಭೆಯು ಬೆಳೆಸಿಕೊಳ್ಳಬೇಕು ಮತ್ತು ಪಟ್ಟಣದಲ್ಲಿ ಕರ್ತನು ಎಬ್ಬಿಸುತ್ತಿರುವ ಪ್ರಾಮಾಣಿಕವಾದ ಅಪೋಸ್ತಲ ಮತ್ತು ಪ್ರವಾದಿತ ನಾಯಕರನ್ನು ಗುರುತು ಹಿಡಿದು ದೃಡಪಡಿಸಿಕೊಳ್ಳಬೇಕು.

ಪಟ್ಟಣದಲ್ಲಿರುವ ಅಪೋಸ್ತಲ ಮತ್ತು ಪ್ರವಾದಿತ ನಾಯಕರು ಒಟ್ಟಾಗಿ ಸೇರಿ ಬಂದು ಜೊತೆಯಾಗಿ ಕಾರ್ಯನಿರ್ವಹಿಸುವಂತೆ, ಪಟ್ಟಣ ವ್ಯಾಪ್ತಿಯ ಸಭೆಯನ್ನು ಸಜ್ಜುಗೊಳಿಸುವಂತೆ ಬೆಳೆಸಬೇಕು. ಪಟ್ಟಣದ ರೂಪಾಂತರಕ್ಕೆ ಅನೇಕ ಜೊತೆ ಕೆಲಸಗಳನ್ನು ಪ್ರಾರಂಬಿಸಿ ನಿರ್ವಹಿಸುವಂತೆ ದಾರಿ ಮಾಡಿಕೊಡಬೇಕು. ಪಟ್ಟಣ ವ್ಯಾಪ್ತಿಯ ಸಭೆಯು ಮಹಾಸಭೆಗಳನ್ನು ಮತ್ತು ಕೂಟಗಳನ್ನು ನಡೆಸಲು ಐಕ್ಯತೆಯ ಸ್ಥಾನಕ್ಕೆ ಬರಬೇಕು. ಕೂಟಗಳನ್ನು ಮತ್ತು ಮಹಾಸಭೆಗಳನ್ನು ನಡೆಸುವುದರ ಮೇಲೆ ಐಕ್ಯತೆಯು ಆಧಾರಗೊಂಡಿಲ್ಲ ಇದು ಮನಸ್ಸಿನ ಮತ್ತು ಹೃದಯದ ಬದಲಾವಣೆಯಾಗಿದೆ. ಇಂತ ಐಕ್ಯತೆಯ ಸ್ಥಾನದಲ್ಲಿ ನಾವು ಜೀವಿಸುವಾಗ ಅದು ನಮಗೆ ಪಟ್ಟಣವನ್ನು ರೂಪಾಂತರಗೊಳಿಸಲು ಬೇಕಾದ ಅವಶ್ಯವುಳ್ಳ ಹೆಜ್ಜೆಗಳನ್ನು ತೆಗೆದುಕೊಳ್ಳಲು ದೃಡ ಪಡಿಸುತ್ತದೆ.

ಪಟ್ಟಣ ವ್ಯಾಪ್ತಿಯ ಸಭೆಯು ಆತ್ಮನ ಐಕ್ಯತೆಯಲ್ಲಿ ಜೀವಿಸಿ ಕಾರ್ಯನಿರ್ವಹಿಸಿದರೆ ಮತ್ತು ವಿಶ್ವಾಸಿಗಳ ಚಳುವಳಿಯಿಂದ ಉಂಟಾದ ಸೇವಾ ಕಾರ್ಯಗಳನ್ನು ಮಾಡಲು ಸಜ್ಜುಗೊಂಡಿರುವ ವಿಶ್ವಾಸಿಗಳ ಸೇನೆ ಇದ್ದರೆ ಕರ್ತನಾದ ಯೇಸು ಕ್ರಿಸ್ತನಿಗೋಸ್ಕರ ನಮ್ಮ ಪಟ್ಟಣಗಳು ಶಕ್ತಿಯುತವಾಗಿ ಸ್ಪರ್ಷಿಸಲ್ಪಟ್ಟಿರುವುದನ್ನು ನೋಡುತ್ತೇವೆ.

## ಸಾಮಾರ್ಥ್ಯವುಳ್ಳ ಅಪಾಯಗಳನ್ನು ಪೂರ್ವಭಾವಿಯಾಗಿ ತಿಳುಕೊಳ್ಳುವುದು

ಸಾಮಾರ್ಥ್ಯವುಳ್ಳ ಯಾವ ಅಪಾಯಗಳನ್ನು ಮತ್ತು ತೊಡಕುಗಳನ್ನು ನಾವು ಊಹಿಸಬಹುದು ಮತ್ತು ಅವುಗಳನ್ನು ಹತೋಟಿಯಲ್ಲಿ ಹೇಗೆ ಇಡಬಹುದು?

**ಪರಿಪಕ್ವತೆ ಇಲ್ಲದ ನಾಯಕತ್ವ**

- ದೇವರ ರಾಜ್ಯದ ಮನೋಭಾವವುಳ್ಳವರಾಗಿರುವುದರ ಬದಲಾಗಿ "ಇದು ನನ್ನ ಸೇವೆ" ಎಂಬ ಮನೋಭಾವವುಳ್ಳ ನಾಯಕತ್ವವನ್ನು ಉಂಟು ಮಾಡುತ್ತದೆ.
- ಕೆಲವು ನಾಯಕರು ಧಾರ್ಮಿಕವಾದ ಸಂಪ್ರಾದಾಯಗಳನ್ನು ಪಾಲಿಸುತ್ತಾ ಈ ಸಂಪ್ರದಾಯಗಳನ್ನು ಉಪಯೋಗಿಸುವುದರ ಮೂಲಕ ಜನರನ್ನು  ಬಂಧನದಲ್ಲಿಟ್ಟಿದ್ದಾರೆ.
- ಕೆಲವು ಸೇವಕರು ಗುರುತಿಸಲ್ಪಡುವುದಕ್ಕಾಗಲಿ, ತಮ್ಮ ಮಹಿಮೆಗಾಗಿ ಮತ್ತು ಸ್ವಾರ್ಥ ಪದೋನ್ನತಿಗಾಗಿ ಆಶೆಯುಳ್ಳವರಾಗಿರುತ್ತಾರೆ.
- ಕರ್ತನಾದ ಯೇಸುವನ್ನೇ ದೃಷ್ಠಿಸುವುದರ ಬದಲು ಕೆಲವರು ಅಪೋಸ್ತಲ ನಾಯಕರುಗಳನ್ನು ಮೇಲಕ್ಕೆತ್ತುತ್ತಾರೆ ಮತ್ತು ಅದು ಜನರಲ್ಲಿ ತೆಗಳಿಕೆಯನ್ನು ಉಂಟುಮಾಡುತ್ತದೆ. ಕೆಲವರು ಬೇರೆ ಸೇವಕರುಗಳಿಂದ ಹೊಂದುವಂತದ್ದನ್ನು ತಡೆಗಟ್ಟಲು ಒಬ್ಬನೇ ಅಪೋಸ್ತಲ ನಾಯುಕನನ್ನು ಹಿಂಬಾಲಿಸಬೇಕೆಂದು ಬೇಡಿಕೆಯೊಡ್ಡುತ್ತಾರೆ.
- ಪಟ್ಟಣ ವ್ಯಾಪ್ತಿಯ ರೂಪಾಂತರಕ್ಕೆ ಕೆಲವು ನಾಯಕರು ಜವಾಬ್ದಾರಿ ಮತ್ತು ನಾಯಕತ್ವದ ಸಂಕಷ್ಟಕ್ಕೆ ಸಿಲುಕಿಕೊಳ್ಳದ ಹಾಗೆ ಇರುತ್ತಾರೆ.
- ರಾಜ್ಯದ ಮನೋಭಾನೆಯ ಹೆಸರಿನಲ್ಲಿ ಕೆಲವು ನಾಯಕರು ಬೇರೆ ನಾಯಕರುಗಳೊಂದಿಗೆ ಇರುವ ಸಂಬಂದವನ್ನು ತೆಗಳಿ ತಮ್ಮದೇ ಆದ ಸ್ವಾರ್ಥ ಕಾರ್ಯಗಳನ್ನು ಮೇಲಕ್ಕೆತ್ತುತ್ತಾರೆ ಇನ್ನೂ ಕೆಲವರು ಕೆಲವು ನಾಯಕರುಗಳ ಮರೆಯಿಲ್ಲದ ಮನೋಭಾವನೆಗಳನ್ನು ಬೇಕೆಂದು ತೆಗೆದುಕೊಂಡು ತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸುತ್ತಾರೆ.

ಹೀಗಿರುವುದರಿಂದ ಬೆಳದ ನಾಯಕರುಗಳು ಇದನ್ನು ಗುರುತಿಸಿ ಅಂತ ಪ್ರಯತ್ನಗಳನ್ನು ಜ್ಞಾನ ಮತ್ತು ವಿವೇಚನೆಯಿಂದ ಕಡಿದುಹಾಕಿ, ಇಂತ ದೋಷಗಳಿಂದ ತಮ್ಮ ಹೃದಯವನ್ನು ಶುದ್ದವಾಗಿಟ್ಟುಕೊಳ್ಳಲು ನೋಡಿಕೊಳ್ಳಬೇಕು.

**ನಾಯಕರುಗಳಾದ ನಮಗೆ ಬಹಳಷ್ಟು ಜ್ಞಾನದ ಅವಶ್ಯವಿದೆ, ನಮ್ಮ ಸ್ವಾರ್ಥಕ್ಕೆ ಸಾಯಲು ಇಚ್ಚಿಸುವಂತದ್ದು ಮತ್ತು ನಮ್ಮದೇ ಆದ ಸಭೆ ಮತ್ತು ಸೇವೆಯ ಬದಲಾಗಿ ದೇವರ ರಾಜ್ಯವನ್ನು ಮೇಲಕ್ಕೆತ್ತಲು ಆಶಿಸಬೇಕು.**

**ಪರಿಪಕ್ವತೆ ಇಲ್ಲದ ವಿಶ್ವಾಸಿಗಳು**

- ಪಟ್ಟಣ ವ್ಯಾಪ್ತಿಯ ಸಭೆಯಲ್ಲಿ ದೇವರ ಆಜ್ಞೆಗಳನ್ನು ಉಲ್ಲಂಘಿಸಿ ತಮ್ಮದೇ ಆದಂತ ನಿಯಮಗಳಿಗೆ ಒಳಗಾಗಿರುವ ವಿಶ್ವಾಸಿಗಳು ಜೊತೆಕೆಲಸ ನಿರ್ವಹಿಸಿ ರಾಜ್ಯ ಮನೋಭಾವನೆಯನ್ನು ಪ್ರೋತ್ಸಾಹಿಸುವಾಗ ವಿಶ್ವಾಸಿಗಳು ತಮಗಿರುವ ಆತ್ಮೀಕ ನಾಯಕತ್ವದ ಮತ್ತು ಸಭೆಯ ಆಡಳಿತದ ಜವಾಬ್ದಾರಿಕೆಯನ್ನು ಮೀರಿ ನಡೆಯಬಾರದು.
- ದೇವರು ನೇಮಿಸಿರುವ ನಾಯಕತ್ವಕ್ಕೆ ವಿರುದ್ದವಾಗಿ ನಡೆಯಬಾರದು. ಆರೋನನು ಮೋಶೆಗೆ ವಿರುದ್ದವಾಗಿ ಮತ್ತು ಅಬ್ಸೋಲೋಮನು ದಾವೀದನಿಗೆ ವಿರುದ್ದವಾಗಿ ಎದ್ದ ಪ್ರಕಾರ ವಿಶ್ವಾಸಿಗಳೂ ನಡೆಯಬಾರದು. ಯೆಹೋಶುವನು ಮೋಶೆಗೆ ಮತ್ತು ದಾವೀದನು ಸೌಲನಿಗೆ ಇದ್ದ ಹಾಗೆ ಇರುವ ವಿಶ್ವಾಸಿಗಳು ಅಗತ್ಯವಿದೆ.
- ಕೆಲ ವಿಶ್ವಾಸಿಗಳು ಕೇವಲ ಅಭಿಮಾನವುಳ್ಳವರಾಗಿ ಜ್ಞಾನ ಮತ್ತು ಪರಿಪಕ್ವತೆ ಇಲ್ಲದೆ ಕೆಲಸ ಮಾಡುತ್ತಾರೆ. ಈ ರೀತಿಯ ಅಭದ್ದವಾದ ಪ್ರಯತ್ನಗಳು ಬೇರೆಯವರು ಸತ್ಯವನ್ನು ತಿರಸ್ಕರಿಸುವಂತೆ ಪ್ರಭಾವ ಬೀರುತ್ತವೆ.

**ವಿಶ್ವಾಸಿಗಳಿಗೆ ದೇವರ ವಾಕ್ಯದಲ್ಲಿ ಒಂದು ಸ್ಥಿರವಾದ ನೆಲೆ ಮತ್ತು ಆತ್ಮನ ಕಾರ್ಯಗಳಲ್ಲಿ ಇರುವ ಪ್ರಕಟನೆ ಅತ್ಯಗತ್ಯವಾಗಿದೆ.**

# ಪ್ರಾರ್ಥನೆ

## ವಿಶ್ವಾಸಿಗಳು ಎದ್ದೇಳುವಂತೆ ಪ್ರಾರ್ಥಿಸುವುದು

ಪ್ರೀತಿಯುಳ್ಳ ತಂದೆಯೇ, ನಮ್ಮ ಪಟ್ಟಣದಲ್ಲಿರುವ ಕ್ರಿಸ್ತನ ದೇಹಕ್ಕಾಗಿ ಯೇಸುವಿನ ನಾಮದಲ್ಲಿ ಪ್ರಾರ್ಥಿಸುತ್ತೇವೆ. ಸಕಲ ಸತ್ಕಾರ್ಯಗಳಲ್ಲಿ ಪ್ರವೀಣರಾಗಿ ಸಜ್ಜುಗೊಂಡಿರುವ ವಿಶ್ವಾಸಿಗಳು ಎದ್ದು ಬರುವಂತೆ ಪ್ರಾರ್ಥಿಸುತ್ತೇವೆ. ಎಲ್ಲಾ ವಿಷಯದಲ್ಲಿ ಕ್ರಿಸ್ತನ ಹಾಗೆ ಜೀವಿಸುವಂತೆ ನಮ್ಮ ಪಟ್ಟಣದ ವಿಶ್ವಾಸಿಗಳು ಎದ್ದುಬರಲು ಪ್ರಾರ್ಥಿಸುತ್ತೇವೆ. ವಿಶ್ವಾಸಿಗಳು ಸೂಚಕ ಕಾರ್ಯಗಳನ್ನು, ಅದ್ಭುತ ಕಾರ್ಯಗಳನ್ನು ಮತ್ತು ಮಹತ್ಕಾರ್ಯಗಳನ್ನು ನಾನಾ ಕಡೆಯಲ್ಲಿರುವ ಶಾಲೆಗಳಲ್ಲಿ, ಕಾಲೇಜುಗಳಲ್ಲಿ, ಆಡಳಿತ ಕಾರ್ಯಲಯಗಳಲ್ಲಿ, ಬೀದಿಗಳಲ್ಲಿ ಮತ್ತು ಕ್ರೀಡಾ ಸ್ಥಳಗಳಲ್ಲಿ ಮತ್ತು ಇತರೆ ಸ್ಥಳಗಳಲ್ಲಿ ಪ್ರದರ್ಶಿಸುವುದರ ಮೂಲಕ ಜನರು ಯೇಸುವನ್ನೇ ಸತ್ಯದೇವರು ಎಂಬುದಾಗಿ ತಿಳಿದು ಮತ್ತು ಆತನಲ್ಲಿ ನಂಬಿಕೆಯಿಡುವಂತೆ ಪ್ರಾರ್ಥಿಸುತ್ತೇವೆ.

## ಐಕ್ಯತೆಗಾಗಿ ಮತ್ತು ಪಟ್ಟಣ ವ್ಯಾಪ್ತಿಯ ಸಭೆಯ ಏಳಿಗೆಗಾಗಿ ಪ್ರಾರ್ಥನೆ

ತಂದೆಯೇ, ನಮ್ಮ ಪಟ್ಟಣದ ವ್ಯಾಪ್ತಿಯ ಸಭೆಯು ಆತ್ಮನ ಐಕ್ಯತೆಯಲ್ಲಿರುವಂತೆ ಪ್ರಾರ್ಥಿಸುತ್ತೇವೆ. ನಮ್ಮ ಪಟ್ಟಣದ ಕ್ರೈಸ್ತ ನಾಯಕರುಗಳು ಆತ್ಮನಲ್ಲಿ ಬಲವಾದ ಐಕ್ಯತೆಯ ಸ್ಥಳಕ್ಕೆ ಬರುವಂತೆ ಪ್ರಾರ್ಥಿಸುತ್ತೇವೆ. ಈ ಐಕ್ಯತೆಯು ಪಟ್ಟಣದ ಎಲ್ಲಾ ವಿಶ್ವಾಸಿಗಳಿಗೆ ಹರಡಲಿ ಎಂದು ಪ್ರಾರ್ಥಿಸುತ್ತೇವೆ. ಈ ಪಟ್ಟಣದಲ್ಲಿ ಕ್ರಿಸ್ತನ ದೇಹವು ದೃಢವಾಗಿರುವಂತೆ, ಮತ್ತು ಯೇಸು ಕ್ರಿಸ್ತನ ಸುವಾರ್ತೆಯು ಎಲ್ಲಾ ಕಡೆ ಪ್ರವೇಶಿಸಿ ಪರಿಶುದ್ಧಾತ್ಮನ ಶಕ್ತಿಯಲ್ಲಿ ಹರಡಿಕೊಳ್ಳುವಂತೆ ಪ್ರಾರ್ಥಿಸುತ್ತೇವೆ.

## ಅಪೋಸ್ತಲರು ಮತ್ತು ಪ್ರವಾದಿಗಳು ಪಟ್ಟಣದಲ್ಲಿ ಎದ್ದೇಳುವಂತೆ ಪ್ರಾರ್ಥನೆ

ಕರ್ತನೆ, ಅಪೋಸ್ತಲರು ಮತ್ತು ಪ್ರವಾದಿಗಳು ನಮ್ಮ ಪಟ್ಟಣದಲ್ಲಿ ಬರೋಣವಾಗುವಂತೆ ಪ್ರಾರ್ಥಿಸುತ್ತೇವೆ. ಪಟ್ಟಣಗಳನ್ನು ರೂಪಾಂತರಗೊಳಿಸುವ ಹೃದಯವುಳ್ಳ ಮತ್ತು ನಿನ್ನ ಸಭೆಯನ್ನು ನಡೆಸುವ ಹೃದಯವುಳ್ಳ ಅಪೋಸ್ತಲ

ಮತ್ತು ಪ್ರವಾದಿಗಳು ಎದ್ದು ಬರುವಂತೆ ಪ್ರಾರ್ಥಿಸುತ್ತೇವೆ. ದೀನ ಸ್ವಭಾವವುಳ್ಳ ಮತ್ತು ಸಾದುತ್ವ ಮನೋಭಾವವುಳ್ಳವರಾಗಿ ಅವರು ನಡೆದುಕೊಳ್ಳುವಂತೆ ಪ್ರಾರ್ಥಿಸುತ್ತೇವೆ. ನಾನಾ ಸಭೆಯ ವಿಶ್ವಾಸಿಗಳೊಂದಿಗೆ ಜೊತೆ ಕೆಲಸ ನಿರ್ವಹಿಸಲು ಮತ್ತು ಪಂಗಡ ಪದ್ಧತಿಗಳ ಗೆರೆಯನ್ನು ದಾಟಿ ಒಂದೇ ಉದ್ದೇಶವುಳ್ಳವರಾಗಿ ನಿನ್ನ ರಾಜ್ಯವು ಬರುವಂತೆ ಮತ್ತು ನಿನ್ನ ಚಿತ್ತವು ಪಟ್ಟಣದಲ್ಲಿ ನೇರವೇರುವಂತೆ ನೋಡಲು, ಇಂತ ನಾಯಕತ್ವವನ್ನು ಒದಗಿಸುವ ಜವಾಬ್ದಾರಿಯನ್ನು ಅವರು ತೆಗೆದುಕೊಳ್ಳಲು ಪ್ರಾರ್ಥಿಸುತ್ತೇವೆ. ಪಟ್ಟಣದ ಬೇರೆ ಬೇರೆ ಕಾರ್ಯ ಕ್ಷೇತ್ರಗಳಲ್ಲಿ ಅಪೋಸ್ತಲರ ಮತ್ತು ಪ್ರವಾದಿಗಳ ಪ್ರವೇಶವಾಗುವಂತೆ ಪ್ರಾರ್ಥಿಸುತ್ತೇವೆ. ನಿನ್ನ ಜನರ ಕಡೆಗೆ ಅವರಲ್ಲಿ ತಂದೆಯ ಹೃದಯವನ್ನುಂಟುಮಾಡು ಎಂಬುದಾಗಿ ಪ್ರಾರ್ಥಿಸುತ್ತೇವೆ

## ಪಟ್ಟಣ ರೂಪಾಂತರಕ್ಕೆ ಪ್ರಾರ್ಥನೆ

ಕರ್ತನೆ, ನಮ್ಮ ಪಟ್ಟಣವು ರಕ್ಷಿಸಲ್ಪಡುವಂತೆ ಪ್ರಾರ್ಥಿಸುತ್ತೇವೆ. ನಮ್ಮ ಪಟ್ಟಣದಲ್ಲಿರುವ ಸಹಸ್ರಾರು ಸಂಖ್ಯೆಯ ಜನರು ಕ್ರಿಸ್ತನಲ್ಲಿ ಸತ್ಯದ ಜ್ಞಾನಕ್ಕೆ ಸೇರಬೇಕೆಂಬುದೆ ನಮ್ಮ ಆಶೆಯಾಗಿದೆ. ನಮ್ಮ ಪಟ್ಟಣವು ಆತ್ಮೀಕತೆಯಲ್ಲಿಯೂ, ಸದಾಚಾರದಲ್ಲಿಯೂ ಮತ್ತು ಜೀವಿತದ ಪ್ರತಿಯೊಂದು ವಿಷಯದಲ್ಲಿಯೂ ರೂಪಾಂತಗೊಳ್ಳಲಿ ಎಂದು ಹಾರೈಸುತ್ತಾ ಯೇಸುವಿನ ನಾಮದಲ್ಲಿ ಪ್ರಾರ್ಥಿಸುತ್ತೇವೆ. ಆಮೇನ್.

## ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಭೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚುಟಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church
Account Number: 0057213809,
IFSC Code: CITI0000004
Bank: Citibank N.A., 506-507,
Level 5, Prestige Meridian 2, # 30,
M.G. Road, Bangalore - 560 001

*ದಯವಿಟ್ಟು ಗಮನಿಸಿ: ಆಲ್ ಪೀಫಲ್ಸ್ ಸಭೆಯು FCRA ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.*

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

# ಆಲ್ ಪೀಪಲ್ಸ್ ಚರ್ಚ್‌ನ ಪ್ರಕಟಣೆಗಳು

ಕೆಲಸದ ಕಡೆಗೆ ಸತ್ಯವೇದದ ನೋಟ
ನಿನ್ನ ಕರೆಯನ್ನು ಕಡೆಗಣಿಸದಿರು
ನಿರೀಕ್ಷೆಯನ್ನು ಕಳೆದುಕೊಳ್ಳಬೇಡ
ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು
ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು
ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು
ದೇವರ ರಾಜ್ಯ ಕಟ್ಟುವವರು
ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ
ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು
ಬೇರುಗಳಿಗೆ ಕೊಡಲಿ ಹಾಕುವುದು
ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು
ಉಜ್ಜೀವನದಲ್ಲಿ ಒಂದು ಸಭೆ
ದೇವರ ಪ್ರಸನ್ನತೆ
ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು
ದೇವರು ಒಳ್ಳೆಯ ದೇವರಾಗಿದ್ದಾನೆ
ಅಸ್ತಿವಾರಗಳು ಭಾಗ - 1
ತೆರೆದ ಪರಲೋಕಗಳು
ಜೀವನದ ರಾತ್ರಿಯ ಸಮಯಗಳು
ಪ್ರಾಮಾಣಿಕತೆ
ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ
ಪರಿವರ್ತನೆ
ಗೌರವದ ಸಂಕೇತ

**ಉಚಿತ ಇ-ಪುಸ್ತಕಗಳು**

ನಮ್ಮ ಚರ್ಚ್ ವೆಬ್ ಸೈಟ್‌ನಿಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ-ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಬಹುದಾಗಿದೆ.

**ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು**

'ಲಿವಿಂಗ್ ಸ್ಪ್ರಾಂಗ್ ಎಂಬ ಗಾಡ್ ಟವಿಯ ಕಾರ್ಯಕ್ರಮದ ಮತ್ತು ಸಮಾವೇಶಗಳ ವಿಡಿಯೋ ರೆಕಾರ್ಡಿಂಗ್‌ಗಳಿಗಾಗಿ ಮತ್ತು ನಮ್ಮ ಭಾನುವಾರದ ಸಂದೇಶಗಳ ಆಡಿಯೋ ರೆಕಾರ್ಡಿಂಗ್ (MP3)ಗಳಿಗಾಗಿ ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿ.

## ಸತ್ಯವೇದ ಶಾಲೆ

ಮತ್ತು ಸೇವಾತರಬೇತಿಕೇಂದ್ರ

ಆಲ್ ಪೀಪಲ್ಸ್ ಸಭೆ - ಮತ್ತು ಸೇವಾತರಬೇತಿ ಕೇಂದ್ರ (A P C - BC & MTC) 2005 ರ ಆಗಸ್ಟ್ ತಿಂಗಳಲ್ಲಿ ಸ್ಥಾಪಿತವಾಯಿತು. ಇಲ್ಲಿ ಪುರುಷರು ಮತ್ತು ಸ್ತ್ರೀಯರನ್ನು ಸೇವೆಗಾಗಿ ಸಿದ್ಧಗೊಳಿಸಿ, ತರಬೇತಿಗೊಳಿಸಿ, ನಂಬಿಗಸ್ಥರಾದವರನ್ನು ಭಾರತದೇಶಕ್ಕೂ ಇತರದೇಶಗಳಿಗೂ - ಹಳ್ಳಿ, ಪಟ್ಟಣ, ನಗರ ಮತ್ತು ರಾಷ್ಟ್ರಗಳನ್ನು ಯೇಸುಕ್ರಿಸ್ತನಿಗಾಗಿ ಗೆಲ್ಲಲು ತರಬೇತಿಗೊಳಿಸುತ್ತೇವೆ.

**ಎ.ಪಿ.ಸಿ - ಬಿ.ಸಿ. / ಎಂ.ಟಿ.ಸಿ. - 2 ಪರಿವಿಡಿಗಳನ್ನು ನೀಡುತ್ತದೆ.**

- ಶೈಕ್ಷಣಿಕ ಪರಿಣಿತಿಯೊಡನೆ ಆತ್ಮಿಕ ಮತ್ತು ಪ್ರಾಯೋಗಿಕ ಸೇವಾತರಬೇತಿಯನ್ನು ಒದಗಿಸುವುದಕ್ಕಾಗಿ ಪೂರ್ಣಾವಧಿ ವಿದ್ಯಾರ್ಥಿಗಳಿಗಾಗಿ 2 ವರ್ಷಗಳ ಸತ್ಯವೇದ ಶಾಲೆಯ ಶಿಕ್ಷಣ ಪರಿವಿಡಿ. 2 ವರ್ಷಗಳ ಪರಿವಿಡಿಗಳನ್ನು ಮುಗಿಸಿದ ವಿದ್ಯಾರ್ಥಿಗಳು **ಡಿಪ್ಲೋಮಾ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ** (Dip.Th/Cm) ಪಡೆದುಕೊಳ್ಳುತ್ತಾರೆ. ತರಗತಿಗಳು ಆಂಗ್ಲಭಾಷೆಯಲ್ಲಿ ನಡೆಸಲ್ಪಡುತ್ತವೆ. ನಮ್ಮ ಬೋಧನಾ ವಿಭಾಗವು ತರಬೇತಿಹೊಂದಿದ ಮತ್ತು ದೇವರ ವಾಕ್ಯದ ಅಭಿಷೇಕ ಹೊಂದಿದ ಶಿಕ್ಷಕರನ್ನು ಒಳಗೊಂಡಿದೆ. ಎಲ್ಲಾ ಬೋಧಕರು ಹಾಗೂ ವಿದ್ಯಾರ್ಥಿಗಳು ಎ.ಪಿ.ಸಿ ಯ ಅಧ್ಯಯನ ಕೇಂದ್ರ ಮತ್ತು ಗ್ರಂಥಾಲಯವನ್ನು (Sc & L) ಉಪಯೋಗಿಸಬಹುದಾಗಿದೆ.

- ಪ್ರಾಯೋಗಿಕ ತರಬೇತಿ ಹೊಂದಲು ಅಪೇಕ್ಷಿಸುವ ನಮ್ಮ ಸತ್ಯವೇದ ಶಾಲೆಯ ಪಧವೀದರರಿಗೆ ಪ್ರಾಯೋಗಿಕ ಸೇವಾ ತರಬೇತಿ ನೀಡುತ್ತೇವೆ. ಒಂದು ಅಥವಾ ಹೆಚ್ಚಿನ ವರ್ಷಗಳನ್ನು ಮುಗಿಸಿದವರು **ಪ್ರಾಯೋಗಿಕ ಸೇವಾ ಪ್ರಮಾಣಪತ್ರ** ಪಡೆದುಕೊಳ್ಳುತ್ತಾರೆ ಮತ್ತು ತೊಡಗಿಸಿಕೊಂಡ ಅವಧಿಯು ಸ್ಪಷ್ಟವಾಗಿ ನಮೂದಿಸಲ್ಪಡುತ್ತದೆ.

ಹೆಚ್ಚಿನ ಮಾಹಿತಿಗಳಿಗಾಗಿ www.apcwo.org/biblecollege ನ್ನು ಸಂಪರ್ಕಿಸಿ.

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣಿಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅಧ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಬೆಂಗಳೂರನ್ನು ಪ್ರಮುಖವಾಗಿಟ್ಟುಕೊಂಡು, ಹೊಸ ಸಭೆಗಳು ನಿಯತಕಾಲಿಕವಾಗಿ ಭಾರತದಾದ್ಯಂತ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪ್ಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿರಿ. www.apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದಿರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೆನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ‘‘ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರವ ನಿತ್ಯಜೀವ’’ ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

**''ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು''** (ಅಪೊಸ್ತಲರ ಕೃತ್ಯ 10:43)

**''ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ''** (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, ''ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ'' ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*

ನಾವು ವಿಶ್ವಾಸಿಗಳನ್ನು ಸಜ್ಜುಗೊಳಿಸಿ ಪರಿಪೂರ್ಣತೆಗೆ ನಡೆಸಿ ಅವರನ್ನು ಲೋಕದೊಳಗಿರುವ ಮನೆಗಳಿಗೆ, ಸಂಘ ಸಂಸ್ಥೆಗಳಗೆ ವಿದ್ಯಾಸಂಸ್ಥೆಗಳಿಗೆ, ನೌಕರವರ್ಗಗಳ ಕಡೆಗೆ ಬಿಡುಗಡೆಗೊಳಿಸುವ ಸಮಯದಲ್ಲಿದ್ದೇವೆ.

ವಿಶ್ವಾಸಿಗಳ ಮೂಲಕ ಯೇಸುಕ್ರಿಸ್ತನ ಕಾರ್ಯಗಳು ನಡೆಯುವಂತೆ; ಅಪೋಸ್ತಲರ ಅಧಿಕಾರದಲ್ಲಿ ಚಲಿಸುವಂತೆ, ಕರ್ತನ ಪ್ರವಾದಿತ ವಾಕ್ಯಗಳನ್ನು ಪ್ರಕಟಿಸುವಂತೆ, ಅದ್ಭುತ ಕಾರ್ಯಗಳನ್ನು ಮಾಡುವಂತೆ ಮತ್ತು ಕ್ರಿಸ್ತನ ಸುವಾರ್ತೆಯ ಮೂಲಕ ಅನೇಕರ ಜೀವಿತಗಳು ಬದಲಾವಣೆ ಹೊಂದಲು ಪ್ರಭಾವಿಸುವಂತೆ ವಿಶ್ವಾಸಿಗಳಿಗೆ ತರಬೇತಿ ನೀಡುವುದು ಅತ್ಯಗತ್ಯವಾಗಿದೆ.

ಸೇವಾಕಾರ್ಯವು ಕೇವಲ ನಾಯಕರುಗಳಿಗೆ ಸೀಮಿತವೆಂದು ವಿಶ್ವಾಸಿಗಳು ಸುಖವಾಗಿ ಕುಳಿತುಕೊಳ್ಳುವುದಕ್ಕೆ ಇದು ಸಮಯವಲ್ಲ. ಭೂಮಿಯ ಮೇಲೆ ದೇವರ ಚಿತ್ತವನ್ನು ನೆರವೇರಿಸಲು ಎಲ್ಲಾ ದೇವ ಜನರು ಬಲಹೊಂದುವಂತದ್ದು ಅವಶ್ಯವಾಗಿದೆ. ಇದು ಪರಿಪೂರ್ಣವಾಗುವಂತೆ ನೋಡಿಕೊಳ್ಳುವಂತದ್ದು ಪ್ರತಿ ಕ್ರೈಸ್ತ ಸೇವಕನ ಜವಾಬ್ದಾರಿಯಾಗಿದೆ. ಸೇವಕರುಗಳಾದ ಇದು ನಮ್ಮ ಬಗ್ಗೆಯಲ್ಲ, ಆದರೆ ಇದು ದೈವ ಜನರಾದ ವಿಶ್ವಾಸಿಗಳ ಬಗ್ಗೆ.

ಪ್ರತಿ ದೈವ ಮಗುವನ್ನು ದೈವ ಸೇವಕನನ್ನಾಗಿ ಸನ್ನದಗೊಳಿಸಿ ಬಿಡುಗಡೆಗೊಳಿಸುವುದರ ಬಗ್ಗೆ ಕಲಿತುಕೊಂಡು ಕೇಂದ್ರೀಯವಾದ ದೇವರ ಹೊಸ ತಿರುವಿನಲ್ಲಿ ಪಾಲ್ಗೊಳ್ಳಬೇಕು. ಇದರಿಂದ ಕ್ರಿಸ್ತನು ಯಾವುದೇ ದೋಷವಿಲ್ಲದ, ಕಳಂಕವಿಲ್ಲದ ಮತ್ತು ಬಲವಾದ ದೇಹವೆಂಬ ಸಭೆಗೆ ಪ್ರತ್ಯಕ್ಷನಾಗಲಿದ್ದಾನೆ.

ಆಶೀಸ್ ರಾಯ್‌ಚುರ್, ಪಾಸ್ಟರ್

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617, +91-80-65970617
Email: contact@apcwo.org
Website: www.apcwo.org